॥धर्मो रक्षति रक्षितः॥

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. 32 No. 12 OCTOBER 2023 Pages 16 Rs. 2/-



Received Donation of Rs. 2,00,000/- from Smt. Jayalaxmi & Shri R. T. Bhatshikar




Havyaka Managing Committe 2023 -2024

**Forthcoming Event - Durga Pooja on 15th October 2023 at Havyakara Sabhagraha, 3-00 pm onwards**

**"Havyaka Sandesha"** is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098.

| | | |
|---|---|---|
| *Hon. Editor* | : | Smt. Amita S. Bhagwat |
| *Editorial Committee* | | Smt. Shashikala Hegde<br>Smt. Tanuja Hegde<br>Shri Ganesh Bhat<br>Smt. Shailaja Hegde |
| *Publisher* | : | Narayan Akadas R.<br>Hon. Gen. Secretary |
| *Printed at* | : | M/s. Navin Printers<br>Mumbai - 400 016.<br>✆ 2430 8316 |

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2023-2024**

| | | |
|---|---|---|
| *President* | : | Shivkumar P. Bhagwat |
| *Vice - President* | : | Vishnu Bhagwat |
| *Hon. Gen. Secretary* | : | Vasant Bhat |
| *Hon. Jt. Secretary* | : | G. V. Hegde |
| *Hon. Treasurer* | : | Ganesh Bhat |

***Elected Members :***

| | |
|---|---|
| Narayan Akadas | Umesh Hegde |
| Sanjay Bhat | Prakash Bhat |
| Smt. Tanuja Hegde | Prakash Hegde |
| Smt. Shashikala Hegde | N. K. Hegde |
| Ramana Bhat | |

***Co-opted Members :***
Chandrashekhar Joshi

***ಸಂಪಾದಕೀಯ***

# ಅನಾವರಣ



ನಾನು ಈ ಸಂಪಾದಕೀಯವನ್ನು ಬರೆಯುವ ಹೊತ್ತಿನಲ್ಲಿ, ರಸ್ತೆಯ ಮೇಲೆ ದೊಡ್ಡ ವಾಹನಗಳ ಹಿಂಭಾಗದಲ್ಲಿರುವ ಗಣಪತಿಯ ಘನ ಮೂರ್ತಿ ಅದಕ್ಕಾಗಿಯೇ ವಿಶೇಷವಾಗಿ ಸಜ್ಜಾದ ಪೆಂಡಾಲ್‌ಗೆ ತೆರಳುತ್ತಿದ್ದರೂ, ಅದರ ಮುಖವನ್ನು ತೆಳುವಾದ ಬಟ್ಟೆಯಿಂದ ಮುಚ್ಚಲಾಗಿದೆ. ತನ್ನ ಗಮ್ಯಸ್ಥಾನಕ್ಕೆ ತಲುಪಿ, ಅಲಂಕಾರಗಳಿಂದ ಸಂಪ್ರೀತನಾದರೂ, ಭಾದ್ರಪದ ಶುಕ್ಲ ಚೌತಿಯಂದೇ ಅವನ ಎದುರಿಗೆ ಕಟ್ಟಿದ ಬಟ್ಟೆಯನ್ನು ಸರಿಸಿ ಭಕ್ತರಿಗೆ ದರ್ಶನಕ್ಕೆ ಅನುವು ಮಾಡಿಕೊಡಲಾಗುತ್ತದೆ.

ಮಣ್ಣಿನಿಂದಲೇ ಆಕಾರ ಪಡೆದ ಮಂಗಲಮೂರ್ತಿ, ಮೂರ್ತಿಕಾರನ ಕೈ ಚಳಕದಲ್ಲಿ ಅದೆಷ್ಟು ಪರಿವರ್ತನೆ ಹೊಂದಿದ್ದಾನೋ ಏನೋ? ಜೇಡಿ ಮಣ್ಣು ಸುಂದರ ಮೂರ್ತಿಯಾಗಿ ಪ್ರಸನ್ನವದನವನ್ನು ಹೊಂದುವ ತನಕ ಅದೆಷ್ಟು ಪರಿಕರಗಳು ಅದರ ಮೇಲಾಡಿವೆಯೋ? ಅದೇನೇ ಇದ್ದರೂ ಅದಕ್ಕೆ ರೂಪ ಕೊಡುವುದು ಕಲಾವಿದನ ಮನಸ್ಸು. ಆ ಮನಸ್ಸಿಗೆ ಪ್ರದರ್ಶನದ ಹಪಾಹಪಿಯಿಲ್ಲ.

'ಪ್ರದರ್ಶನವು' ವೈಭವವನ್ನು ಬಯಸುತ್ತದೆ. ಪ್ರಶಂಸೆಗಾಗಿ ಹಂಬಲಿಸುತ್ತದೆ. ಪ್ರದರ್ಶನವೆಂಬ ಶಬ್ದದಲ್ಲಿ ಜನರ ಗಮನವನ್ನು ಸೆಳೆಯುವ ಬಯಕೆಯಿದೆ. ಹೂಗಳ ಪ್ರದರ್ಶನ, ಹಣ್ಣುಗಳ ಪ್ರದರ್ಶನ, ರೇಷ್ಮೆ ಸೀರೆಗಳ ಪ್ರದರ್ಶನ - ಇವುಗಳ ಹಿಂದೆ ಜನಪ್ರಿಯತೆ ಅಥವಾ ಲಾಭದ ಲಾಲಸೆಯಿದೆ. ಆದರೆ 'ಅನಾವರಣ'ವೆನ್ನುವ ಶಬ್ದದಲ್ಲಿ ತನ್ನ ಅಸ್ಮಿತೆಯನ್ನು ಹೊರಸೂಸುವ ಉತ್ಕಟತೆಯಿದೆ.

ದೇವರ ಎದುರಿಗೆ ಕೈ ಮುಗಿದು ಶಾಂತವಾದರೂ ಸಾಕು, ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ. 'ಲಾಲ್‌ಬಾಗ್ ಕಾ ರಾಜಾ'ದಲ್ಲಿರುವ ದೇವನು, ಮಂಡಲವನ್ನು ಬರೆದು ಅಡಿಕೆಯನ್ನಿಟ್ಟು ಆಹ್ವಾನಿಸಿದರೂ ಬರುವನು. ಆದರೂ ಭಕ್ತರಿಗೆ ಡೋಲಿನ ಸದ್ದು ಹಾಗೂ ಲೌಡ್‌ಸ್ಪೀಕರ್ ಗೌಜಿಯ ಬಯಕೆ.

ಯಾರನ್ನು ಮೆಚ್ಚಿಸಬೇಕೆಂದು ಹೂವು ಅರಳದಿದ್ದರೂ ಅದರ ಪರಿಮಳವು ಅನಾವರಣಗೊಳ್ಳುತ್ತದೆ. ಸೂರ್ಯೋದಯದ ಕೆಂಪು, ಆಕಾಶದ ನೀಲಿ ಅದೆಷ್ಟೋ ಕಲಾವಿದರ ಕುಂಚಕ್ಕೆ ಚಾಲನೆ ನೀಡುತ್ತದೆ. ಜಲಪಾತದಿಂದ ಧುಮುಕಿದ ನೀರಿನ ಹನಿಗಳೊಳಗಿನಿಂದ ಸೂರ್ಯ ಕಿರಣಗಳು ಹಾದು ಬಂದು ಮೂಡಿದ ಕಾಮನಬಿಲ್ಲು ಕರಗುವ ಮುನ್ನ, ಆ ದೃಶ್ಯ ಕಣ್ಣಿಗೆ ಬಿದ್ದರೆ ನೋಡುವವರ ಕಣ್ಣುಗಳೇ ಪಾವನ. ಯಾವ ಧ್ವನಿವರ್ಧಕವಿಲ್ಲದಿದ್ದರೂ ಮೋಡಗಳ ಘರ್ಷಣೆಯಲ್ಲಿ ಮಿಂಚು ಕಣ್ಣು ಕೋರೈಸುತ್ತದೆ. ತಲ್ಲಣವೂ ಸಹಜ. ವೈಭವವೂ ಸಹಜ. ಸೃಷ್ಟಿಯಲ್ಲಿ ಸೃಷ್ಟಿಕರ್ತನ ನಾನಾ ರೂಪಗಳು ತಾನಾಗಿಯೇ ಅನಾವರಣಗೊಳ್ಳುತ್ತವೆ.

ಭಕ್ತಿಯೂ ಕೂಡ ಪರವಶತೆಯ ಪ್ರತಿಫಲ. ಅದು ಕಾಣದ ಶಕ್ತಿಯೊಡನೆ ನಮ್ಮನ್ನು ಬೆಸೆಯುವ ಕೊಂಡಿ. ಆ ಕೊಂಡಿಯು ಭದ್ರವಾಗಿದ್ದರೆ ಅದು ನಮ್ಮ ನಡವಳಿಕೆಗಳಲ್ಲಿ ಅನಾವರಣಗೊಳ್ಳುತ್ತದೆ. ಈ ಬದುಕು ನಮಗೆ ದೊರಕಿದೆ ಎಂದರೆ ಸೃಷ್ಟಿಕರ್ತನು ನಮ್ಮಿಂದ ಏನನ್ನು ಬಯಸುತ್ತಾನೆ ಎಂದು ವಿಚಾರ ಮಾಡಬೇಕಲ್ಲವೇ? ನಮ್ಮಿಂದ ಸುತ್ತಮುತ್ತಲಿನ ವಾತಾವರಣ ಕಳೆಕಳೆಯಾಗಿ, ಸಂತೋಷ ಹುಲುಸಾಗಿ ಬೆಳೆದರೆ ಸೃಷ್ಟಿಕರ್ತನಿಗೆ ಸಂತೋಷವಾದೀತು.

ಅಮಿತಾ ಎಸ್ ಭಾಗವತ್

e-mail : amitabhagwat@gmail.com

# *From The President's Desk*

Dear Friends,



In this festive season we become more energetic, more hopeful and feel blessed. It is only because of the grace of Almighty we gather strength to march ahead and progress further.

The Annual General Body meeting held on 27th August went on well. The entertainment program was interesting and we got one more opportunity to enjoy in-house talent.

As you all may be aware a new Managing Committee is constituted. Mr. Vishnu Bhagwat has taken over as the Vice-President, Mr. Vasant Bhat as Secretary and Mr. Ganesh Bhat as Treasurer. What is important is not the post but a commitment in ensuring that the Trust functions smoothly and the members participate in large numbers. It is also important that we conduct qualitative program. I very much appreciate the service rendered by Mr. Sanjay Bhat in the capacity of Vice President and Mr. Narayan Akadas in the capacity of Secretary. It is because of their sincerity, hard work and dedication we could work harmoniously to build a strong Havyaka Welfare Trust. I am sure that the Office Bearers and the Managing Committee Members will continue in achieving the objects of the Trust.

It is regretted to note the sad demise of our Past President Mr. G.N.Hegde on 16th September. He had attended the AGB meeting and also participated in a jovial mood. He will always be remembered by us. We pray the Almighty to give Sadgati to the departed soul.

As informed in the AGB meeting our Trust is in its 60th year. To celebrate, we will be holding various programs during the year which will be intimated in our Sandesha. We will also keep our members informed through our official WhatsApp group "Havyaka Sangha, Mumbai". We are sure that with the active participation and support of our members the programs will be a memorable one.

The Annual Durga Pooja is scheduled on 15th October at our Bhavana. Apart from the Pooja, our lady members will be reciting the Lalita Sahasranama and Bhajans will be sung by the Dombivli Bhajan Mandali. We will also be felicitating meritorious students and senior male members. We request our members to attend in large numbers and seek the blessings of Shree Mate.

We will meet again during the auspiciousness of Navaratri. Wishing you all a Happy Navratri.

With Regards,

**S. P. BHAGWAT**
**President**

## HAVYAKA WELFARE TRUST BANK A/C DETAILS

Due to the merger of Corporation Bank with the Union Bank of India we request the members to note the change in the bank details

**Union Bank of India, Santacruz (E), Mumbai Branch, Mumbai 400 029**

1) **Havyaka Welfare Trust**
   **S.B. A/c No. 520101249405926**
   **IFS Code : UBINO904996**
2) **Havyaka Welfare Trust Women Welfare Cell**
   **S.B. A/c No. 520101249405962**
   **IFS CODE : UBINO904996**

**Donations to 'Havyaka Welfare Trust' qualify for tax deduction under section 80 (G).**

*PAGE DONATED BY : **HEGDE HOSPITAL, CHEMBUR**, COURTESY : **DR. DINESH HEGDE***

# ಮಾಸ ಮಹಾತ್ಮ್ಯ

✍ ಗಣಪತಿ ಭಟ್ಟ

*(ಕಳೆದ ಸಂಚಿಕೆಯಿಂದ)*

ಋಷಿ ಪಂಚಮಿ ವ್ರತದಲ್ಲಿ ಕಶ್ಯಪೋऽತ್ರಿರ್ಭರದ್ವಾಜೋ ವಿಶ್ವಾಮಿತ್ರೋಥ ಗಾಲಮಃ। ಜಮದ ಗ್ರಿಬಸಿ-ಶ್ಚಶ್ಚ ಸಾಧ್ವೀ ಚೈವಾಪ್ಯರುಂಧತೀ ।।' ಈ ಶ್ಲೋಕದೊಳಗೆ ಹೇಳಿದ ಏಳು ಋಷಿಗಳ ಪೂಜೆಯನ್ನು ಮಾಡತಕ್ಕದ್ದು. ಈ ಋಷಿಗಳನ್ನೇ ಉಪಾಕರ್ಮದ ಕಾಲಕ್ಕೂ ಪೂಜಿಸುವರು.

'ಸಪ್ತರ್ಷೀಣಾಮಗಸ್ತ್ಯಾಷ್ಟಮಾನಾಂ ಯದಪತ್ಯಂ ತದ್ಗೋತ್ರಮ್ ।।' ಇತಿ ಬೋಧಾಯನೌದಯಃ।। ಎಂಬ ವಾಕ್ಯದ ಮೇಲಿಂದ ಈ ಸಪ್ತ ಋಷಿಗಳು, ಅಗಸ್ತ್ಯರು ಸಹ ಗೋತ್ರದ ಮೂಲ ಪುರುಷರು ಅಥವಾ ಗೋತ್ರಪತಿಗಳೆಂದು ತಿಳಿಯಬೇಕು. ಎಲ್ಲ ಗೋತ್ರಗಳೂ ಈ ಏಳು ಋಷಿಗಳಿಂದಲೇ ಉಂಟಾದವು. ಕಾರಣ ಈ ಸಪ್ತರ್ಷಿಗಳು ಪೂಜ್ಯರಾದರು. ಎಂಟನೆಯವರಾದ ಅಗಸ್ತ್ಯರೂ ಗೋತ್ರಪತಿಗಳಾಗಿದ್ದು ಅವರೂ ಪೂಜ್ಯರೇ ಸರಿ. ಆದರೆ ಅವರು ದಕ್ಷಿಣ ಹಿಂದುಸ್ಥಾನದಲ್ಲಿ ವಾಸವಾಗಿದ್ದದರಿಂದಲೇ ಸಪ್ತರ್ಷಿಗಳೊಳಗೆ ಸೇರಲಿಲ್ಲವೆಂದು ತೋರುತ್ತದೆ.

**ಋಷಿ ಹಾಗೂ ವೇದ –** 'ऋषिर्दर्शनात्, स्तोमान्ददर्शेत्यौपमन्यवः' ಇತ್ಯಾದಿ ನಿರುಕ್ತದ (ಅ. 2 ಖಂಡ 11) ವಾಕ್ಯಗಳಲ್ಲಿ 'ತಪಸ್ಸಮಾಧಿನಿಷ್ಠನಾಗಿ ಆತ್ಮಸಾಕ್ಷಾತ್ಕಾರದಿಂದ ಇಂದ್ರಿಯಗಳಿಗೆ ಅಗೋಚರವಾದ ಅರ್ಥಗಳನ್ನು ನೋಡಿ (ದರ್ಶನ ಮಾಡಿ) ಆ ಅರ್ಥ ಬೋಧಕವಾದ ಛಂದೋಬದ್ಧವಾದ ಮಂತ್ರವಾಣಿಯನ್ನು ಅಂತಃ ಶ್ರವಣದಿಂದ ಸ್ವತಃ ಕೇಳಿ (ಶ್ರವಣ ಮಾಡಿ) ಆ ವಾಣಿಯನ್ನು ಯಥಾಶ್ರುತವಾಗಿ ಉಪದೇಶಿಸುವವನೇ ಋಷಿಯು' ಎಂಬ ತಾತ್ಪರ್ಯವಿರುತ್ತದೆ.

'ऊर्ध्वरेतास्तपस्युग्रो नियताशी च संयमी । शापानुग्रहयोः शक्तः सत्यसन्धो भवेदृषिः' ಇತ್ಯಾದಿ ಋಷಿಲಕ್ಷಣವನ್ನು ಹೇಳಿದ್ದಾರೆ. ಅಂತು ಋಷಿಯೆಂದರೆ ಮಂತ್ರಾರ್ಥ ದರ್ಶನ ಮಾಡಿದವನು; ಮಂತ್ರವಾಣಿಯನ್ನು ಶ್ರವಣಮಾಡಿದವನು ಹಾಗೂ ಹೇಳಿದವನು; ಎಂಬ ತಾತ್ಪರ್ಯವು. ಹೀಗೆ ಮಾಡಬೇಕಾದರೆ ಅವನಲ್ಲಿ ಮೇಲೆ ಹೇಳಿದ ಊರ್ಧ್ವರೇತಸ್ಸು, ಉಗ್ರ ತಪಸ್ಸು, ನಿಯತಾಶನ ಇತ್ಯಾದಿ ಗುಣಗಳಿರಬೇಕಾಗುತ್ತವೆ. ಇಂಥ ಋಷಿಯು ತನ್ನ ಸಮಾಧಿಸ್ಥಿತಿಯಲ್ಲಿ ಅಂದರೆ ಬಾಹ್ಯ ಹಾಗೂ ಅಂತರಿಂದ್ರಿಯಗಳ ವಿಷಯ ವೃತ್ತಿಯಿಂದ ಅಲಿಪ್ತವಾದ ಸ್ಥಿತಿಯಲ್ಲಿ ಯಾವ ಶಬ್ದರಾಶಿಯ ಅರ್ಥವನ್ನು ನೋಡಿದನೋ, ಯಾವ ಶಬ್ದವನ್ನು ಕೇಳಿದನೋ ಅದೇ ವೇದವು. ಆದ್ದರಿಂದಲೇ ವೇದಕ್ಕೆ ದರ್ಶನ, ಶ್ರುತಿ, ಎಂಬ ಹೆಸರುಗಳು ಬಂದವು ಹಾಗೂ ತಾನು ಕೇಳಿದಂತೆ ಶ್ರವಣಮಾಡಿಸಿದ್ದರಿಂದ ಅನುಶ್ರವವೆಂತಲೂ ಹೆಸರು. ಇದಕ್ಕಾಗಿಯೇ ವೇದವು ಅಪೌರುಷೇಯ ವಾದದ್ದೆಂದೆನಿಸುವದು; ಅಂದರೆ ಸಾಮಾನ್ಯವಾಗಿ ರಚಿಸಿದ ಶ್ಲೋಕಗಳಲ್ಲೆಂಬ ತಾತ್ಪರ್ಯವು. ವೇದಮಂತ್ರಗಳ ಋಷ್ಯಾದಿಗಳನ್ನು ಹೇಳುವಾಗ ಅದರ ದರ್ಶನ, ಶ್ರವಣ ಮಾಡಿದ ಋಷಿಗಳ ಹೆಸರನ್ನೇ ಹೇಳಿದ್ದಾರೆ. ಇಂಥ ಋಷಿಗಳಲ್ಲಿ ಗರ್ಗೀ, ವಾರ್ಚಕ್ನವಿ ಮೊದಲಾದ ಕೆಲವು ಸ್ತ್ರೀಯರೂ ಇರುವರು.

ಶುಕ್ಲ 6 ಗೆ ಸೂರ್ಯಷಷ್ಠಿಯೆನ್ನುವರು. ಈ ದಿನ ಕಾರ್ತಿಕಸ್ವಾಮಿ, (ಸುಬ್ರಹ್ಮಣ್ಯ) ದರ್ಶನದಿಂದ ಬ್ರಹ್ಮಹತ್ಯಾದಿ ಪಾಪಗಳು ದೂರಾಗುವವು.

ಇದೇ ಶು. 8 ದಿನ ದೂರ್ವಾಷ್ಟಮೀವ್ರತವನ್ನು ಹೇಳಿದ್ದಾರೆ. ಈ ದಿನ ದೂರ್ವೆಯನ್ನು ಪೂಜಿಸಿತಂದು ಅದರಿಂದ ಈಶ್ವರನನ್ನು ಅಥವಾ ಗಣೇಶನನ್ನು ಪೂಜಿಸುವದು; ಇದು ಸ್ತ್ರೀಯರಿಗೆ ನಿತ್ಯವ್ರತವಾಗಿದೆ. ದೂರ್ವೆಯು ಹಬ್ಬಿದಂತೆ ಸಂತತಿವೃದ್ಧಿಯಾಗುವದೇ ಇದರ ಫಲವು.



ಬಿಳೀದಾದ ಹಾಗೂ ಉತ್ತರಾಭಿ ಮುಖವಾಗಿ ಹೋದ ದೂರ್ವೆಯು ಶ್ರೇಷ್ಠವಾದದ್ದು.

ಈ ಶುಕ್ಲ ದ್ವಾದಶಿಯು ವಾಮನ ಜಯಂತಿಯು. ಇದಲ್ಲದೆ ಈ ದಿವಸ ವಿಷ್ಣುಪರಿವರ್ತನೋತ್ಸವವನ್ನು ಹೇಳಿದ್ದಾರೆ. ಆಷಾಢ ಶು. 11ಯಲ್ಲಿ ಮಲಗಿದ ಶ್ರೀವಿಷ್ಣುವು ಕಾರ್ತಿಕ ಶು. 12ಯ ದಿನ ಪ್ರಬೋಧ ಹೊಂದುವನಷ್ಟೇ? ಈ ಮಧ್ಯದಲ್ಲಿ ಒಂದು ಮಗ್ಗಲಾಗುವನೆಂಬ ಭಾವನೆಯು. ಶ್ರವಣ ನಕ್ಷತ್ರಯುಕ್ತವಾದ ಈ ದ್ವಾದಶಿಯು ಶ್ರವಣ ದ್ವಾದಶಿಯೆನಿಸುವದು. ಶ್ರಾವಣ ಶು. 12 ಯ ದಿನ ಪ್ರಾರಂಭಿಸಿದ ದಧಿವರ್ಜನ ವ್ರತವನ್ನು ಈ ದಿವಸ ಮುಗಿಸಿ ಪಯೋವರ್ಜನವ್ರತವನ್ನಾರಂಭಿಸತಕ್ಕದ್ದು.

**ವಾಮನ ಜಯಂತಿ –** ಭಾದ್ರಪದ ಶು. 11 ಯ ದಿನ ಉಪೋಷಣವಾಗಿದ್ದು ಮಧ್ಯಾಹ್ನ ಕಾಲದಲ್ಲಿ ಶ್ರೀವಾಮನನ ಪೂಜೆಮಾಡತಕ್ಕದ್ದು. ರಾತ್ರಿ ವಾಮನಾವತಾರದ ಕಥಾಶ್ರವಣ ಮಾಡತಕ್ಕದ್ದು. ಹಾಗೂ ರಾತ್ರಿ ಜಾಗರಣ ಮಾಡಿ ದ್ವಾದಶಿ ದಿನ ವಾಮನನನ್ನು ಪೂಜಿಸಿ ಆ ಮೂರ್ತಿಯನ್ನು ಬ್ರಾಹ್ಮಣರಿಗೆ ದಾನಮಾಡಬೇಕು. ಹಾಲು-ಮೊಸರು ತುಂಬಿದ ಪಾತ್ರೆ, ಛತ್ರ, ಉಪಾನಹ ಮುಂತಾದವುಗಳನ್ನು ದಾನ ಮಾಡುವದಲ್ಲದೆ ಬ್ರಾಹ್ಮಣ ಭೋಜನವನ್ನು ಮಾಡಿಸಬೇಕು.

ಮಹಾರಾಷ್ಟ್ರದೊಳಗಿನ ಕೆಲವು ವೈಷ್ಣವ ಬ್ರಾಹ್ಮಣರಲ್ಲಿ ಮಾತ್ರ ಈ ವ್ರತವು ಪ್ರಚಾರದಲ್ಲಿರುತ್ತದೆ. ಮಲಬಾರ ಪ್ರಾಂತದಲ್ಲಿ ಇದಕ್ಕೆ 'ಓಣಮ್' ಎಂಬ ಹೆಸರಿದ್ದು ಅಲ್ಲಿ ಈ ದಿನ ಪ್ರೇಕ್ಷಣೀಯವಾದ ಉತ್ಸವ ನಡೆಯುವದು. ರಾಕ್ಷಸರ ರಾಜ್ಯವು ಹೋಗಿ ದೇವತೆಗಳ ರಾಜ್ಯವು ಸ್ಥಾಪಿತವಾದ ಬಳಿಕ ಪ್ರಜೆಗಳ ಸ್ಥಿತಿಯು ಹ್ಯಾಗಿರುವದೆಂಬದನ್ನು ನೋಡುವದಕ್ಕೆ ಬಲಿಯು ಈ ದಿನ ಭೂಮಿಗೆ ಬರುವನೆಂದು ಅವರು ತಿಳಿಯುವರಂತೆ.

ಈ ಅವತಾರವು ವಿಷ್ಣುವಿನ ದಶಾವತಾರಗಳಲ್ಲಿ ಐದನೆದು. ವಿಷ್ಣುಭಕ್ತನಾದ ಪ್ರಹ್ಲಾದನ ಮೊಮ್ಮಗ (ವಿರೋಚನನ ಮಗ) ನಾದ ಬಲಿಯು ತನ್ನ ಗುರುಗಳಾದ ಶುಕ್ರಾಚಾರ್ಯರ ಅಭಿಪ್ರಾಯದಂತೆ ವಿಶ್ವಜಿದ್ಯಾಗವನ್ನು ಮಾಡಿ ಬಲಿಷ್ಠನಾಗಿ ದೇವತೆಗಳನ್ನೆಲ್ಲ ಸೋಲಿಸಿ ದೇವಲೋಕಸಹಿತವಾದ ಈ ಭೂಮಿಯನ್ನು ಚಕ್ರವರ್ತಿಯಾಗಿ ಆಳಹತ್ತಿದನು. ಹಾಗೂ ತನ್ನ ಇಂದ್ರಪದವಿಯನ್ನು ಸ್ಥಿರಪಡಿಸಿಕೊಳ್ಳುವದಕ್ಕಾಗಿ ನೂರು ಯಜ್ಞಮಾಡುವ ದನ್ನು ಸಂಕಲ್ಪಿಸಿ ಪ್ರಾರಂಭಿಸಿದನು. ಇದರಿಂದ ದೇವತೆಗಳ ಪ್ರಾರ್ಥನೆಯಂತೆ ಶ್ರೀ ವಿಷ್ಣುವು ಅದಿತಿಯಲ್ಲಿ ವಾಮನಾವತಾರವನ್ನು ಮಾಡಿ ಬಲಿಯು ಯಜ್ಞ ಮಾಡುತ್ತಿರುವಲ್ಲಿಗೆ ಹೋಗಿ ತ್ರಿಪಾದಭೂಮಿಯನ್ನು ದಾನ ಕೇಳಿದನು. ದಾತೃವೆಂದು ದಿಗಂತಕೀರ್ತಿವಂತನಾದ ಬಲಿಯು ಅದಕ್ಕೆ ಒಡಂಬಟ್ಟನು. ಇವನ ಗುರುಗಳಾದ ಶುಕ್ರಾಚಾರ್ಯರು ವಾಮನನ ಕಪಟವನ್ನು ತಿಳಿದು ನಿಷೇಧಿಸಿದರೂ ಸತ್ಯಪ್ರತಿಜ್ಞನಾದ ಬಲಿಯು ತನ್ನ ವಚನಪಾಲಿಸುವುದನ್ನೇ ನಿಶ್ಚಯಿಸಿ ತ್ರಿಪಾದಭೂಮಿಯನ್ನು ನೀರುಬಿಟ್ಟು ವಾಮನನ ಕೈಯ್ಯಲ್ಲಿ ಕೊಟ್ಟನು. ಕೂಡಲೇ ವಾಮನನು ವಿಶ್ವರೂಪವನ್ನು ಪ್ರಕಟಿಸಿ ಎರಡು ಪಾದಗಳಿಂದ ಯಾವತ್ತೂ ವಿಶ್ವವನ್ನೇ ಅಳೆದು ಮೂರನೇ ಪಾದವನ್ನು ನಮ್ರವಾದ ಬಲಿಯ ತಲೆಯ ಮೇಲಿಟ್ಟು ಅವನನ್ನು ಪಾತಾಳಕ್ಕೆ ಕಳುಹಿಸಿದನು. ಪ್ರಹ್ಲಾದನಿಗೆ ಕೊಟ್ಟ ವರದಂತೆ ಬಲಿಯು ಅವಧ್ಯನಾದ್ದ ರಿಂದಲೂ, ಸದ್ಗುಣಿಯಾದ್ದರಿಂದಲೂ, ಅವನನ್ನು ಪಾತಾಳಕ್ಕೆ ಒಡೆಯನ ನ್ನಾಗಿ ಮಾಡಿ ದೀಪಾವಳಿಯಲ್ಲಿ ಮೂರು ದಿನ ಬಲಿರಾಜ್ಯವು ಈ ಭೂಮಿಯ ಮೇಲೆ ನಡೆಯುವಂತೆ ವರವಿತ್ತನು.

*(ಮುಂದುವರಿಯುವುದು)*

*PAGE DONATED BY : **SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

# NEW MEMBERS

| No. | Name & Address | Native |
|---|---|---|
| PT-136 | Madhav N. Markande, Dombivli | Gokarna |
| PT-137 | Anand Madhav Markande, Dombivli | Gokarna |
| LM-1665 | Suresh Ramachandra Hegde, Virar | Kangod-Sirsi |
| LM -1666 | Sheela Suresh Hegde, Virar | Kangod-Sirsi |
| LM -1667 | Chandrashekhar Bhat, Chembur | Dharmasthala |
| LM-1668 | Sateesh S. Avabrath, Kandivli | Bhatkal |
| LM-1669 | Rajat Ganesh Bhat, Kandivli | Sugavi-Sirsi |
| LM-1670 | Sandeep M. Bhat, Pune | Karki |
| LM-1671 | Medhini Akshay Hegde, Chembur | Siddapur-Kyadgi |
| LM-1672 | Akshay S. Hegde, Chembur | Siddapur-Kyadgi |
| LM-1673 | Sujatha Sadanand Bhat, Bhandup | Bislakoppa, Sirsi |
| LM-1674 | Shreya Ganapati Hegde, Mulund | Muroor, Kumta |
| LM-1675 | Bhavana Vishal Menon, Mulund | Honnavar |
| LM-1676 | Harshini R. Hegde, Thane | Kalkatte-Kansur |
| LM-1677 | Uma Rama Kameshwar, Thane | Gokarna |
| LM-1678 | Sangeeta Prakash Hegde, Thane | Sirsi |
| LM-1679 | Shravya Nagaraj Kanalli | Sirsi |
| LM-1680 | Vibha Bhagwat, Thane | Honnavar |
| LM-1681 | Asha V. Bhagwat, Thane | Honnavar |
| LM-1682 | Sumana Nagraj Bhat, Thane | Sirsi |
| LM-1683 | Sudha Jagadish Hegde, Thane | Honnavar |
| LM-1684 | Nidhi Vasant Bhat, Thane | Sirsi |
| LM-1685 | Shanta Krishna Upadhya, Thane | Kumta |

*PAGE DONATED BY :* ***AKADAS & FAMILY***

# ಸುಬ್ಬು

✍ **ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ**

ಸುಬ್ಬು, ತಂದೆಗೆ ಒಬ್ಬನೇ ಮಗ. ಆತನ ಮೂಲ ಹೆಸರು ಸುಬ್ರಾಯನೊ, ಸುಬ್ರಹ್ಮಣ್ಯನೊ ಅಥವಾ ಮತ್ತಿನ್ನೇನೊ ಎಂಬುದರ ಬಗ್ಗೆ ಯಾರೂ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಕಾರಣ ಆತ, ಊರಿಗೆಲ್ಲ ಸುಬ್ಬು ಹಾಗೂ ಸುಬ್ಬು ಅಂದರೆ ಪ್ರೀತಿಯಿಂದ ಓಗುಡುತ್ತಿದ್ದ. ಅಷ್ಟಕ್ಕೂ ಹೆಸರಿನಲ್ಲೇನಿದೆ? ಕರೆಯಲು, ಗುರುತಿಸಲು ಒಂದು ಬೇಕು.

ಸುಬ್ಬುವಿಗೆ, ನಾವೆಲ್ಲ ಸಾಮಾನ್ಯವಾಗಿ ಹೇಳಿಕೊಳ್ಳುವ 'ಶಿಕ್ಷಣ', ಅಂದರೆ ಶಾಲೆ, ಕಾಲೇಜು, ವಿಶ್ವ ವಿದ್ಯಾಲಯಗಳಿಗೆ ಹೋಗಿ 'ಸರ್ಟಿಫಿಕೇಟ್' ಪಡೆಯುವುದರಲ್ಲಿ ಆಸಕ್ತಿಯೇ ಇರಲಿಲ್ಲ. ಹೀಗಾಗಿ ಅಂತೂ ಇಂತೂ ಮಾಧ್ಯಮಿಕ ಹಂತ ತಲುಪಿದ ಮೇಲೆ ಶಿಕ್ಷಣಕ್ಕೆ ತಿಲಾಂಜಲಿ! ಹಾಗಂತ, ಮನೆಯಲ್ಲಿ ಸಾಕಷ್ಟು ಅಡಿಕೆ ತೋಟ, ಭತ್ತದ ಗದ್ದೆ, ಹಣ್ಣು-ಹಂಪಲುಗಳ ಮರ ಇದ್ದಿದ್ದರಿಂದ ಅವುಗಳನ್ನು ನೋಡಿಕೊಳ್ಳಲೂ ಅಪ್ಪನಿಗೆ ಒಬ್ಬರು ಬೇಕಿತ್ತು. ಹೀಗಾಗಿ ಮಗನ ಮುಂದಿನ ಶಿಕ್ಷಣದ ಬಗ್ಗೂ ಒತ್ತಾಯ ಇರಲಿಲ್ಲ. ಸುಬ್ಬುವಿಗೂ ಕೃಷಿಯಲ್ಲಿ ಆಸಕ್ತಿ ಇದ್ದುದರಿಂದ, ಅಪ್ಪನಿಗೆ ಸಹಾಯಕನಾಗಿ ನಿಂತಿದ್ದ.

ಸುಬ್ಬು ಅತ್ಯಂತ ಆರೋಗ್ಯವಂತ. ದಷ್ಟ - ಪುಷ್ಟ ಕಾಯ, ನಮ್ಮಲ್ಲಿ ಹೇಳುತ್ತಾರಲ್ಲ 'ಗುದ್ದು ಹೊಡೆದು ನೀರು ತರಿಸುವಂತಹ' ಶರೀರ ! ಆದರೂ ಹೃದಯ ವೈಶಾಲ್ಯತೆ, ಪರೋಪಕಾರಿ ಬುದ್ಧಿ ಇತ್ತು. ಆದರೇಕೊ ತುಸು ಜಾಸ್ತಿ ಕಪ್ಪಾಗಿದ್ದ. ಹೀಗಾಗಿ, ಮದುವೆ ವಯಸ್ಸಿಗೆ ಬಂದರೂ ಯಾವೊಬ್ಬ ಹುಡುಗಿಯೂ ಸಿಕ್ಕಲಿಲ್ಲ. ಈಗಿತ್ತಲಾಗಿ, ಅದರಲ್ಲೂ, ಹವ್ಯಕರಲ್ಲಿ ತುಸು ಜಾಸ್ತಿ ಎಂಬಂತೆ, ಮನೆಯಲ್ಲಿ ಎಷ್ಟೇ ಆಸ್ತಿ ಇರಲಿ, ಕೈ ತುಂಬ ಕೆಲಸವಿದ್ದು, ಆರೋಗ್ಯವಾಗಿದ್ದರೂ, ಜೀವನಕ್ಕೆ ಯಾವುದೇ ಕೊರತೆ ಇಲ್ಲದಿದ್ದರೂ ನಮ್ಮ ಹೆಣ್ಣು ಮಕ್ಕಳಿಗೆ 'ನೌಕರಿ' ಯಲ್ಲಿರುವವನೇ ಬೇಕು ಮತ್ತು ಶಹರದಲ್ಲಿ ವಾಸಿಸುವಂತಿರಬೇಕು. ಅಲ್ಲಿ ಎಂತಹ ನೌಕರಿ, ಅದೆಷ್ಟು ಸಂಬಳ, ಯಾವ ರೀತಿ ಮನೆ ಎಂಬುದೆಲ್ಲ ಲೆಕ್ಕಕ್ಕೇ ಇಲ್ಲ. ಹೀಗಾಗಿ ಸುಬ್ಬುವಿಗೆ 'ಮದುವೆ ಭಾಗ್ಯ' ಬಂದೊದಗಲೇ ಇಲ್ಲ. ಹಾಗಂತ ಸುಬ್ಬು ಇದಕ್ಕೆ ಸ್ವಲ್ಪವೂ ತಲೆ ಕೆಡಿಸಿಕೊಳ್ಳದೇ ತನ್ನ ಕೆಲಸಗಳಲ್ಲಿ ಸದಾ ನಿರತನಾಗಿರುತ್ತಿದ್ದ. ಬದುಕಿನಲ್ಲಿ ಆಸಕ್ತಿಯನ್ನೂ ಕಳೆದುಕೊಂಡಿರಲಿಲ್ಲ.

ಅಷ್ಟರಲ್ಲೇ ಅವನ ತಾಯಿಯೂ ಅದಾವುದೋ ಗಂಭೀರ ಕಾಯಿಲೆಯಿಂದ ಮೃತಳಾದಳು. ಈಗ ಸುಬ್ಬುವಿಗೆ ಇನ್ನೊಂದು ಹೆಚ್ಚಿನ ಕೆಲಸ ಬಂತು. ಅಕ್ಕ - ತಂಗಿಯರ ಮದುವೆ ಆಗಿ ಅವರೆಲ್ಲ ತಮ್ಮ ತಮ್ಮ ಸಂಸಾರದಲ್ಲಿ ವ್ಯಸ್ಥರಾಗಿರುವುದರಿಂದ, ಅಪ್ಪನಿಗೆ ಕೂಳು ಬೇಯಿಸುವುದೂ ಸುಬ್ಬುವಿನ ಪಾಲಿಗೇ ಬಂತು. ಸುಬ್ಬು, ಅಡುಗೆಯಲ್ಲೂ ಪ್ರವೀಣನಾದದ್ದರಿಂದ, ಈ ಕೆಲಸವನ್ನೂ ಅತ್ಯಂತ ಶ್ರದ್ಧೆಯಿಂದ ಮಾಡುತ್ತಿದ್ದ. ತಿಂಡಿ, ಊಟ ತಯಾರು ಮಾಡಿಟ್ಟು, ತನ್ನ ಕೆಲಸಗಳಿಗೆ ತೆರಳುತ್ತಿದ್ದ. ಅಡುಗೆಯಲ್ಲಿ ವಿಶೇಷ ಆಸಕ್ತಿ ಇದ್ದಿದ್ದರಿಂದ, ಕೆಲ ತಿಂಡಿ ತಿನಸುಗಳನ್ನು ತಯಾರು ಮಾಡಿಕೊಂಡು ಸಂಜೆಯ ಕೆಲ ಸಮಯ ಒಂದು ಸ್ಟಾಲ್ ಇಟ್ಟು ವ್ಯಾಪಾರವನ್ನೂ ಮಾಡುತ್ತಿದ್ದ. ಇದು ಯಾವುದೇ ವ್ಯಾಪಾರಿ ದೃಷ್ಟಿಯಿಂದಲ್ಲವಾಗಿತ್ತು. ಏನೋ ಒಂದು ರೀತಿಯ ಹುರುಪು, ಅಷ್ಟೇ.

ಸುಬ್ಬು, ಪರೋಪಕಾರಕ್ಕೆ ಇನ್ನೊಂದು ಹೆಸರಾಗಿದ್ದ. ಊರಲ್ಲಿ ಯಾರಿಗೆ ಏನೇ ತೊಂದರೆ ಬಂದರೂ ಅದಕ್ಕೆಲ್ಲ ಸುಬ್ಬು ಸದಾ ರೆಡಿ. ಕೊರೋನಾ ಸಮಯದಲ್ಲಂತೂ, ಯಾರಿಗೇ ಸ್ವಲ್ಪ ನೆಗಡಿ, ಕೆಮ್ಮು ಬಂದರೂ ಕೂಡಲೇ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸುತ್ತಿದ್ದ.



ಸುಬ್ಬುವಿಗೆ ಪೇಂಟಿಂಗ್‌ನಲ್ಲೂ ಆಸಕ್ತಿ ಇತ್ತು. ತಮ್ಮವರೆಂಬವರ ಮನೆಗೆ ಅವಶ್ಯಬಿದ್ದಾಗೆಲ್ಲ ಹೋಗಿ ಆ ಕೆಲಸವನ್ನೂ ಅಚ್ಚುಕಟ್ಟಾಗಿ ಮಾಡಿಕೊಡುತ್ತಿದ್ದ. ಇದೂ ಒಂದು ಹವ್ಯಾಸ, ದಂಧೆ ಅಲ್ಲ. ಯಾವುದೇ ಕೆಲಸ ಸುಬ್ಬುವಿಗೆ ಸೋಂಪಿಸಿದರೆಂದರೆ ಆ ಬಗ್ಗೆ ತಲೆ ಕೆಡಿಸಿಕೊಳ್ಳುವ ಪ್ರಮೇಯವೇ ಬರುತ್ತಿರಲಿಲ್ಲ. ಅಷ್ಟೊಂದು ಶ್ರದ್ಧೆ.

ಇನ್ನೊಂದು ಅತ್ಯಂತ ವಿರಳ ಸ್ವಭಾವ ಅಂದರೆ, ಅವನಲ್ಲಿ ಅಪರಿಮಿತ ಮನೋಬಲ ಇತ್ತು. ಸಣ್ಣ ಪುಟ್ಟ ಕಾಯಿಲೆಗಳೆಲ್ಲ ಅವನಿಗೆ ಯಾವ ಲೆಕ್ಕಕ್ಕೂ ಇಲ್ಲ. ಅವನಿಗೆ ಬೈಕ್ ಓಡಿಸುವ ಅದರಲ್ಲೂ ವೇಗವಾಗಿ ಓಡಿಸುವ ಅಭ್ಯಾಸವಿತ್ತು. ಹೀಗಾಗಿ ಒಮ್ಮೆ ವೇಗವಾಗಿ ಬೈಕ್ ಓಡಿಸುತ್ತಿದ್ದಾಗ ಎದುರಿನಿಂದ ಬಂದ ದೊಡ್ಡ ವಾಹನಕ್ಕೆ ಡಿಕ್ಕಿ ಹೊಡೆದರ ಪರಿಣಾಮ, ಎರಡೂ ಕಾಲುಗಳಿಗೆ ವಿಪರೀತ ಹೊಡೆತ ಬಿದ್ದಾಗ, ವೈದ್ಯರೂ ಯಾವುದೇ ಭರವಸೆ ಕೊಡದಿದ್ದಾಗಲೂ, ಕೇವಲ ಎರಡೇ ತಿಂಗಳಲ್ಲಿ ಮೊದಲಿನ ವೇಗದಲ್ಲೇ ಬೈಕ್ ಓಡಿಸುವಂತಾಗಿಬಿಟ್ಟ! ಇದನ್ನೇ ಅನ್ನುವುದು ಮನೋಬಲ.

ಅತಿ ಹೆಚ್ಚು ಗಾಡಿ ಓಡಿಸುವದು ಮತ್ತು ತುಸು ಜಾಸ್ತಿ ಖಾರ ತಿನ್ನುತ್ತಿದ್ದರಿಂದ ಮೂಲವ್ಯಾಧಿ ಕಾಡತೊಡಗಿತ್ತು. ಮೊದಮೊದಲು ನಿರ್ಲಕ್ಷ್ಯ ಮಾಡಿದರೂ, ಕೊನೆಗೆ ಚಿಕಿತ್ಸೆಗೆಂದು ಹೊರಟಾಗ, ದಾರಿ ಮದ್ಯದಲ್ಲೇ ಅಸುನೀಗಿದ. ಕೆಲವರು ಹೃದಯಾಘಾತ ಅಂದರು, ಇನ್ನು ಕೆಲವರು ಮೂಲವ್ಯಾಧಿಯಿಂದಲೇ ಅಂದರು ಇನ್ನು ಕೆಲವರು ಕೊರೋನಾ ಅಂತಲೂ ಅಂದರು. ವೈದ್ಯಕೀಯ ತಪಾಸಣೆಯ ನಂತರ ಅವನಿಗೂ ಕೊರೋನಾ ಪೊಸಿಟಿವ್ ಇದ್ದಿದ್ದು ಸಾಬೀತಾಯಿತು.

ನೂರಾರು ಜನರಿಗೆ ಕೊರೋನಾ ಚಿಕಿತ್ಸೆ ಕೊಡಿಸಿದವ, ಕೊನೆಗೆ ತಾನೂ ಹಾಗೇ ಕೊನೆಯುಸಿರೆಳೆದಿದ್ದು 'ಪರೋಪಕಾರಾಯ ಇದಂ ಶರೀರಂ' ಎಂಬುದನ್ನು ಸಾಬೀತು ಪಡಿಸಿದಂತಾಯಿತು ! ❍

## ಜಾಸ್ತಿ-ಭರ್ತಿ

ಮುಂಜಾನೆ ಎಲ್ಲಡೆ ಹೂಗಳ್ಳರೇ ಜಾಸ್ತಿ
ಅವರ ಮನೆಯಲ್ಲಿ ಹೂಗಳಿದ್ದರೂ ಭರ್ತಿ
ಗಿಡಗಳ ಮುರಿದು ತೋರುವರು ತಾಕತ್ತು
ಬೆಳೆದವರ ಕಷ್ಟ ನಷ್ಟ ಅವರಿಗೇನು ಗೊತ್ತು?

**- ಲಕ್ಷ್ಮಣ ಶಾನಭಾಗ, ಕಡತೋಕಾ**

*PAGE DONATED BY : **SHRI N. R. HEGDE, DOMBIVLI***

ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗ

ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ


ಹಾಗೂ

ಮೈಸೂರು ಅಸೋಸಿಯೇಶನ್

ಇವರ ಸಂಯುಕ್ತ ಆಶ್ರಯದಲ್ಲಿ



# ನೀಲಿನಕ್ಷೆ




ಕಾದಂಬರಿ ಮುಂಬಯಿಯಲ್ಲಿ ಬಿಡುಗಡೆ

ಲೇಖಕರು : ಅಮಿತಾ ಭಾಗವತ್

ದಿನಾಂಕ : ಶನಿವಾರ, **7** ಅಕ್ಟೋಬರ್, **2023** ಸಮಯ : ಮಧ್ಯಾಹ್ನ **2.30**ರಿಂದ

ಸ್ಥಳ : ಮೈಸೂರು ಅಸೋಸಿಯೇಶನ್, ಮೊದಲನೆಯ ಮಾಳಿಗೆ,
**393**, ಭಾವುದಾಜಿ ರೋಡ್, ಮಾಟುಂಗಾ, ಮುಂಬಯಿ

| | | |
|---|---|---|
| ಅಧ್ಯಕ್ಷರು | : | **ಡಾ. ಜಿ. ಎನ್. ಉಪಾಧ್ಯ**<br>(ಪ್ರಾಧ್ಯಾಪಕರು, ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ) |
| ಕೃತಿ ಬಿಡುಗಡೆ | : | **ಶ್ರೀಮತಿ ಮಿತ್ರಾ ವೆಂಕಟ್ರಾಜ್**<br>(ಕತೆಗಾರರು, ಕಾದಂಬರಿಕಾರರು) |
| ಮುಖ್ಯ ಅತಿಥಿಗಳು | : | **ನ್ಯಾಯವಾದಿ ಶಿವಕುಮಾರ್ ಭಾಗವತ್**<br>(ಅಧ್ಯಕ್ಷರು, ಹವ್ಯಕ ವೆಲ್ಫೇರ್ ಟ್ರಸ್ಟ್ ಮುಂಬಯಿ)<br>**ಶ್ರೀಮತಿ ಕಮಲಾ ಕೆ.**<br>(ಅಧ್ಯಕ್ಷರು, ಮೈಸೂರು ಅಸೋಸಿಯೇಶನ್) |
| ಕೃತಿಯ ಕುರಿತು | : | **ಶ್ರೀಮತಿ ಕಲಾ ಭಾಗ್ವತ್**<br>(ಸಂಶೋಧನ ವಿದ್ಯಾರ್ಥಿ, ಮುಂಬಯಿ ವಿಶ್ವವಿದ್ಯಾಲಯ) |
| ಕಾದಂಬರಿಯ ಆಯ್ದ ಭಾಗ ವಾಚನ | : | **ಶ್ರೀ ಮೋಹನ್ ಮಾರ್ನಾಡ್**<br>(ರಂಗ ಕಲಾವಿದರು)<br>**ಶ್ರೀಮತಿ ನಳಿನಾ ಪ್ರಸಾದ್**<br>(ಸಂಶೋಧನ ವಿದ್ಯಾರ್ಥಿ, ಮುಂಬಯಿ ವಿಶ್ವವಿದ್ಯಾಲಯ) |
| ಕಾರ್ಯಕ್ರಮ ಸಂಯೋಜನೆ, ನಿರೂಪಣೆ | : | **ಡಾ. ಪೂರ್ಣಿಮಾ ಎಸ್. ಶೆಟ್ಟಿ**<br>(ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ) |
| ಲೇಖಕರೊಂದಿಗೆ ಸಂವಾದ | : | ಮಧ್ಯಾಹ್ನ ಗಂಟೆ 2-30ರಿಂದ 3-00ರ ವರೆಗೆ |
| ಸಂಗೀತ ರಸಮಂಜರಿ ಕಾರ್ಯಕ್ರಮ | : | ಸಂಜೆ 5-00 ಗಂಟೆಯಿಂದ |
| ಗಾಯಕರು | : | **ಅಪರ್ಣಾ ಭಟ್, ಜ್ಯೋತಿ ಭಟ್, ಚಂದ್ರಶೇಖರ್ ಜೋಶಿ,<br>ಕಲಾ ಭಾಗ್ವತ್, ಸೀಮಾ ಹೆಗಡೆ, ಕಾವ್ಯ ಭಾಗವತ್,<br>ಸುಕನ್ಯಾ ರವೀಂದ್ರ, ಅಮೃತಾ ಹೆಗಡೆ, ರಜತ್ ಹೆಗಡೆ** |
| ತಬಲಾ ವಾದನ | : | **ಸತೀಶ್ ಹೆಗಡೆ** |
| ಹಾರ್ಮೋನಿಯಂ | : | **ರೋಹಿತಾಕ್ಷ ಶೆಟ್ಟಿ, ಅಭಯ ಹೆಗಡೆ** |

**ಎಲ್ಲರಿಗೂ ಆದರದ ಸ್ವಾಗತ**

*PAGE DONATED BY :* ***SHRI ROKESH HEGDE & FAMILY, DAHISAR***

ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ (ರಿ.)

# HAVYAKA WELFARE TRUST, MUMBAI (R.)

## VISION, MISSION AND VALUE STATEMENT

**VISION :** To create a world where every individual has access to the basic necessities of life including education, health, opportunities for growth and a chance to thrive, regardless of their background or circumstances.

**MISSION :** Our mission is to alleviate suffering, empower communities and create lasting change by providing essential services.

**VALUES :** 1. **Compassion:** We believe in showing empathy, understanding and kindness towards those in need, striving to make a positive impact on their lives.

2. **Integrity:** We are committed to upholding the highest ethical standards, transparency and accountability in all our actions, ensuring the trust and confidence of our members, doners and beneficiaries.

3. **Welfare:** We are committed to aid and provide the service related to health, education, yoga and any other object of general public utility.

4. **Empowerment:** We are dedicated to empowering individuals and communities, promoting self-sufficiency and creating opportunities for personal and collective growth.

5. **Sustainability:** We are committed to environmentally responsible practices, sustainable development and long term solutions that ensure the well-being of current and future generations.

Through our vision, mission and values, we strive to make a meaningful difference in the lives of those we serve and contribute to building a more equitable and just society.

PAGE DONATED BY : **SHRI ANANT GANESH BHAT, BANDRA & FAMILY**

# Thinking of Risk before Return

✍ Vinod N. Bhat

**Asset Allocation in Practice**

Siddharth was having a discussion with his new client Ashwin regarding Asset Allocation.

He had explained that just like a balanced meal was necessary to provide our body with all the necessary nutrients in order to stay healthy, our investment portfolio also needed to have a balanced asset allocation across Equity, Fixed Income, Commodities, and Real Estate/Infrastructure through REITs/InvITs.

The biggest advantage was that since these asset classes were negatively correlated, even if some of them were not performing well at any point in time, others would be doing well. So, our overall portfolio would provide stable risk-adjusted returns and could grow to become a sizeable corpus over time.

'I understand the concept now, Siddharth.' Ashwin said after some thought. 'But how do I implement this in practice?'

'Well, to start with we'll need to understand your risk profile i.e., whether you can be an aggressive, moderate, or conservative investor. And that depends on a number of factors such as your age, your income and household net worth, and your goals and timelines.'

'OK. I am 38 years old and my wife Reshma is a housewife. We have one son who is seven years old. My salary is Rs. 40 lakhs. I am paying the EMI for my home loan but would like to start saving for my son's higher education. I can save and invest Rs 10,000 every month towards this goal.'

'That's good to know. You still have time on your side and your income will likely keep increasing. And you have more than a decade to reach your goal. So, you can be a bit aggressive as far as your investments are concerned.'

'Hmm. So how would that translate to my asset allocation?'

'It means you can have a relatively higher allocation to Equities which is the highest risk asset class because it can be highly volatile over short time frames. But if your time frame is more than a decade, then you don't need to worry too much. Over a longer time frame, Equities has typically delivered returns that handily beat inflation.'

'OK. So how much allocation should I have to Equities?'

'It's always good to think in terms of ranges. Your Equity allocation can be in the range of 55-85% with a median allocation of 70%. And the easiest way to do this is through SIPs in Equity Mutual Funds.'

'Could you please explain in a bit more detail how this would work?'

'I mean if your total portfolio value is Rs 10 lakh to keep it simple, then we should aim to keep the Equity portion between Rs 5.5 to 8.5 lakh with a median value of Rs 7 lakh. And every 3 months or 6 months, we should revisit your portfolio to see if any rebalancing is needed. '

'How would we do that?'



'You see, if the stock market has corrected, you can put more money every month into Equity Mutual Funds and increase your Equity allocation to 85%. On the other hand, if the stock market has seen a rally, then you would put less money into Equity Mutual Funds or even sell some units to reduce your Equity allocation to 55%. But on average, and in normal circumstances, you would try and maintain your Equity allocation to around 70%.'

'OK. I understand this part. But what about the rest of my portfolio?'

'Good question. That's the next decision we would need to take. If your Equity allocation is in the range of 55% to 85% with a median level of 70%, then it means the rest of your portfolio which can constitute Fixed Income, Gold or Silver, and REITs/InvITs will be in the range of 45% to 15% with a median level of 30%.'

'Yes, that's quite clear.'

'So,we would take a call on whether price levels for Gold or Silver are attractive enough to warrant a 5% to 10% allocation. Or whether the yield on REITs/InvITs are attractive enough to warrant a 5% to 10% allocation. And the balance would be the allocation to Fixed Income through Debt Mutual Funds.'

'Hmm. So, if I have a 70% allocation to Equities, 5% each to Gold and 5% to InvITs, then the remaining 20% allocation would be to Fixed Income.'

'You got that right.'

'So, every month I would invest Rs 10,000 of which Rs 7,000 would be invested in Equity Mutual Funds, Rs 2,000 to Debt Mutual Funds, and Rs. 500 each to Gold and Silver.'

'Correct.'

'And every 3 months or 6 months, you and I would have a discussion and see if this allocation needs any rebalancing based on market conditions.'

'Absolutely.'

'Well, I must say this is not so difficult to understand at all,' Ashwin said with a smile.

'It isn't. It's quite basic actually,' Siddharth replied.

'I do have one question though. How will we choose the Equity Mutual Funds and Debt Mutual Funds to invest in?' Ashwin asked him.

'Ha ha. You are smart. That's the next piece of the puzzle. Let me explain,' Siddarth answered.

*(to be continued)*

[Vinod Bhat is the author of the book **'The Financial Independence Marathon'** which has been recently published by Penguin India. Readers can refer to the book for many such golden nuggets. The book is available on Amazon.in at : https://www.amazon.in/Financial-Independence-Marathon-Unlock-Power/dp/0143459988]

*PAGE DONATED BY : **SHRI V. G. BHAT, NIGDI***

# ಸ್ತ್ರೀ ಪ್ರಜ್ಞೆಯಲ್ಲಿ ಮೂಡಿಬಂದ ಸಶಕ್ತ ಕೃತಿ

**✍ ಡಾ. ಜಿ. ಎನ್. ಉಪಾಧ್ಯ, ಮುಂಬೈ**

ಕೃತಿ : **'ನೀಲಿ ನಕ್ಷೆ' (ಕಾದಂಬರಿ)**

ಲೇಖಕರು : ಅಮಿತಾ ಭಾಗವತ್


ಪ್ರಕಾಶಕರು : ಅಂಕಿತ ಪುಸ್ತಕ, ಬೆಂಗಳೂರು

ಬೆಲೆ : ರೂ. 350/-

ಸಾಹಿತ್ಯ ವಲಯವಾಗಿ ಮುಂಬೈ ಹೆಸರು ಮಾಡುತ್ತಾ ಬಂದಿದೆ. ಕನ್ನಡ ವಾಙ್ಮಯಕ್ಕೆ ಹೊಸನೀರು ಹಾಯಿಸಿದ ಕೀರ್ತಿ ಮುಂಬೈ ಕನ್ನಡ ಲೇಖಕರಿಗೆ ಸಲ್ಲುತ್ತದೆ. ಕವಿಯಾಗಿ ಹೆಸರು ಮಾಡಿದ ಅಮಿತಾ ಭಾಗವತ್ ಅವರ ಮೊದಲ ಕಾದಂಬರಿ ನೀಲಿನಕ್ಷೆ ಇತ್ತೀಚೆಗೆ ಅಂಕಿತ ಪುಸ್ತಕದ ಮೂಲಕ ಬೆಳಕು ಕಂಡಿದೆ. ಮುಂಬೈ ಕೇಂದ್ರಿತ ಕಾದಂಬರಿಗಳನ್ನು ಬರೆದು ಸೈ ಎನಿಸಿಕೊಂಡ ಬಲ್ಲಾಳ, ಚಿತ್ತಾಲ, ನಿಂಜೂರ್ ಮೊದಲಾದವರ ಸಾಲಿಗೆ ಇದೀಗ ಅಮಿತಾ ಅವರ ಹೆಸರೂ ಸೇರ್ಪಡೆಯಾಗಿದೆ. ಕಾದಂಬರಿ ಮಾಧ್ಯಮಗಳನ್ನು ಗಂಭೀರವಾಗಿ ಪರಿಗಣಿಸಿ ಈ ಕೃತಿಯನ್ನು ಅವರು ರಚಿಸಿರುವುದು ವಿಶೇಷ.

ಕಾನೂನು ತಜ್ಞರಾಗಿ ಸಾರ್ವಜನಿಕ ರಂಗದಲ್ಲಿ ಕ್ರಿಯಾಶೀಲರಾಗಿರುವ ಅಮಿತಾ ಭಾಗವತ್ ಅವರು ಮಹಿಳೆಯರ ತವಕ ತಲ್ಲಣಗಳನ್ನು ಅರಿತವರು. ಗೃಹಿಣಿಯ ಬದುಕೇ ಮಹಿಳೆಯ ಆದರ್ಶ ಎಂಬ ಸರಳ ಸೂತ್ರದಿಂದ ಹೆಣೆಯಲ್ಪಟ್ಟ ಕಾದಂಬರಿ ಇದಲ್ಲ. ವಾಸ್ತವಿಕತೆ, ಹೊರಜಗತ್ತಿನ ಸ್ಪಷ್ಟವಾದ ಗ್ರಹಿಕೆ, ಸ್ತ್ರೀ ಸ್ವಾತಂತ್ರ್ಯ, ಸ್ತ್ರೀ ವಿದ್ಯಾಭ್ಯಾಸ, ಗಂಡು -ಹೆಣ್ಣುಗಳ ನಡುವೆ ಸಮಾಜ ತೋರುತ್ತಿರುವ ಪಕ್ಷಪಾತ, ಮಹಿಳೆಯ ಬದುಕಿನಲ್ಲಿ ಉಂಟಾಗುತ್ತಿರುವ ಸ್ಥಿತ್ಯಂತರ ಮೊದಲಾದ ಅಂಶಗಳ ವಿಶ್ಲೇಷಣೆ ಈ ಕಾದಂಬರಿ ನೆಲೆ ಪಡೆದಿರುವುದು ಅವಲೋಕನೀಯವಾಗಿದೆ. ಕಾರವಾರ ದಂತಹ ಸಾಮಾನ್ಯ ಪಟ್ಟಣದಿಂದ ಬಂದ ಯುವತಿಯೊಬ್ಬಳು ತನ್ನ ಆತ್ಮಬಲದಿಂದ ಈ ಮಾಯಾನಗರಿಯಲ್ಲಿ ಬೆಳಗಿ ಬಾಳಿದ ಕಥನ ಈ ಕಾದಂಬರಿಯ ಮುಖ್ಯವಸ್ತು. ಅಮಾಯಕ, ಮುಗ್ಧ ಹೆಣ್ಣೊಬ್ಬಳು ತನ್ನ ಸಂಕಲ್ಪ ಶಕ್ತಿಯಿಂದ ಸುತ್ತಲಿನ ಆವರಣದ ಮೇಲೆ ಪ್ರಭುತ್ವ ಸಾಧಿಸಬಲ್ಲಳು ಎಂಬುದನ್ನು ಎತ್ತಿತೋರಿಸಿರುವುದು ಈ ಕಾದಂಬರಿಯ ಧನಾತ್ಮಕ ಅಂಶ. ಇದು ಸ್ತ್ರೀ ಪ್ರಜ್ಞೆಯಲ್ಲಿ ಮೂಡಿ ಬಂದ ಒಳ್ಳೆಯ ಕೃತಿ ಎಂಬುದು ಉಲ್ಲೇಖನೀಯ ಅಂಶ.

ಇದೊಂದು ಸ್ತ್ರೀ ಪ್ರಧಾನ ಕಾದಂಬರಿ. ಸರಯೂ ಸ್ವಾಭಿಮಾನವಿರುವ ದಿಟ್ಟಯುವತಿ. ಚೆಲುವೆಯಾದ ಅವಳು ಉದಾತ್ತಗುಣ ಸ್ವಭಾವಗಳ ಬುದ್ಧಿವಂತ ಮಹಿಳೆ. ಸರಯೂಳ ಮುಂಬೈ ಜೀವನ; ಅಸ್ತಿತ್ವಕ್ಕಾಗಿ ಅವಳ ಹೋರಾಟ ಕಾದಂಬರಿಯ ಅವಕಾಶವನ್ನು ತುಂಬಿಕೊಂಡಿದೆ. ಅವಳ ಆಂತರಿಕ ಬೆಳವಣಿಗೆ ಕಾದಂಬರಿಯ ಮುಖ್ಯ ಆಶಯವಾಗಿದೆ. ನಿರಾಕರಣೆಯಿಂದ ಸ್ವೀಕಾರದತ್ತ ಅವಳ ಬದುಕಿನ ಚಲನೆ ಸಾಗುತ್ತದೆ. ಸರಯೂಳ ಜೀವನದ ವಿವಿಧ ಹಂತಗಳನ್ನು, ಸಾಧನೆಗಳನ್ನು, ವ್ಯಕ್ತಿ, ಘಟನೆಗಳನ್ನು ಕಾದಂಬರಿ ನಮ್ಮೆದುರು ತೆರೆದಿಡುತ್ತದೆ.




ಈ ಕಾದಂಬರಿಯು ಮೊದಲರ್ಧ ಮೇಲೊಡ್ರಾಮ್ಯಾಟಿಕ್ ರೀತಿಯದಾಗಿ ಕಾಣಿಸಿಕೊಂಡರೂ ಮುಂದೆ ಅದು ಹಲವು ಆಯಾಮಗಳನ್ನು ಪಡೆದು ತನ್ನ ಅರ್ಥ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದೆ. ಈ ಕಾದಂಬರಿಯ ಬಹುತೇಕ ಕಥೆ ನಡೆಯುವುದು ಮುಂಬೈ ಯಲ್ಲೇ. ಸರಯೂ ಮುಂಬೈಗೆ ಹೊರಗಿನವಳು. ತಂದೆಯ ಅನಾದರ, ತನ್ನ ರೂಪವೇ ತನಗೆ ಮುಳುವಾಗುವುದು, ಒಲವಿನ ಸೆಲೆ ಹರಿಸಿದ ವಿಶಾಲ್ ಹಾಗೂ ನಿಖಿಲ್‌ರ ಆತ್ಮವಿಶ್ವಾಸದ ಕೊರತೆ, ಕೊನೆಗೆ ಅನಿವಾರ್ಯವಾಗಿ ವಿಧುರ, ಎರಡು ಮಕ್ಕಳ ತಂದೆ ಅಂಕಿತ್ ಜತೆಗೆ ಮದುವೆ, ಬಳಿಕ ಬಂದ ಏಳುಬೀಳುಗಳ ಕಥನದಲ್ಲಿ ನಾಟಕೀಯ ಗುಣ ಬೆರೆತು ಕಾದಂಬರಿ ವಾಚನೀಯವೂ ಆಕರ್ಷಕವೂ ಆಗಿದೆ. ನೀಲಿನಕ್ಷೆಯ ಕಥೆ ಸರಯೂಳ ಮದುವೆಯ ಮೂಲಕ ಪರ್ಯವಸಾನ ಹೊಂದುವುದು ನಿಜವಾದರೂ ಹೆಣ್ಣೊಬ್ಬಳ ಮಹತ್ವಾಕಾಂಕ್ಷೆ ಅದು ಕೈಗೂಡುವವರೆಗೂ ಅವಳು ವಿಶ್ರಮಿಸದಿರುವುದು, ಅವಳ ಅರಿವು, ವಿವೇಕ ಬೇರೆಯೇ ದಿಕ್ಕಿನಲ್ಲಿ ಹರಿದು ಕಠಿಣ ಮಾರ್ಗದಲ್ಲಿ ಕ್ರಮಿಸುವುದು, ಆಧುನಿಕ ಮಹಿಳೆ ಎದುರಿಸುತ್ತಿರುವ ಸವಾಲುಗಳು ಹಾಗೂ ಪರಿಹಾರಗಳ ವಿವೇಚನೆ, ನಮ್ಮ ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ಜೀವನವನ್ನು ಸದೂರವಾಗಿ ನಿಂತು ನೋಡುವ ವಸ್ತುನಿಷ್ಠ ಪ್ರಯತ್ನ ಈ ಕಾದಂಬರಿಯ ಧನಾತ್ಮಕ ಅಂಶಗಳು. 'ತಾನು ಅಪ್ಪ ಹೇಳಿದ ಹುಡುಗನನ್ನು ಮದುವೆಯಾಗಿ, ಅಮ್ಮನ ಹಾಗೆ ಬಂಗಾರ ಹೇರಿಕೊಂಡು, ಕೇವಲ ಅಡಿಗೆಯನ್ನು ಮಾಡುತ್ತ ಜೀವನವನ್ನು ಕಳೆಯಲಿದ್ದೇನೆಯೇ? ಆ ಭಾಗ್ಯಕ್ಕೆ ನಾನೇಕೆ ಮುಂಬೈಗೆ ಬರಬೇಕಿತ್ತು (ಪುಟ 206)' ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸ್ವಾಭಿಮಾನ ಮತ್ತು ಅಹಂಕಾರ ಪ್ರಮುಖ ಪಾತ್ರ ವಹಿಸುತ್ತವೆ ಎಂಬ ಗಂಭೀರ ಜಿಜ್ಞಾಸೆ ಇಲ್ಲಿ ಸೊಗಸಾಗಿ ಸೂಚ್ಯವಾಗಿ ವ್ಯಕ್ತವಾಗಿದೆ. ಇದೊಂದು ಬರೇ ಅನುಕರಣಶೀಲ ಕಾದಂಬರಿಯಲ್ಲ. ನಮ್ಮ ಸಾಂಪ್ರತ ಸಮಾಜದ ಪರಿವರ್ತನೆಯ ಪ್ರಕ್ರಿಯೆ ಎತ್ತ ಸಾಗಿದೆ ಎಂಬ ಚರ್ಚೆ ಸಂವಾದವೂ ಇಲ್ಲಿ ನೆಲೆ ಪಡೆದಿರುವುದು ವಿಶೇಷ. ಒಲ್ಲದ ಮನಸ್ಸಿನಿಂದ ಮುಂಬೈಗೆ ಬಂದು ಓದು ಮುಂದುವರಿಸಿ ತನ್ನ ಬದುಕಿನ ಹೊಣೆ ಹೊತ್ತ ದಿಟ್ಟ ಮಹಿಳೆಯ ಕಥನ ಈ ಕೃತಿಯಲ್ಲಿ ಸಶಕ್ತವಾಗಿ ಅರಳಿ ನಿಂತಿದೆ. ಅಮಿತಾ ಅವರ ಕಲಾನಿಷ್ಠೆ, ಕಾವ್ಯಮಯ ಭಾಷೆ, ಕಾದಂಬರಿಯ ಬಂಧ, ಮನೋವಿಶ್ಲೇಷಣಾತ್ಮಕ ಧಾಟಿ, ವಿಚಾರ ಹಾಗೂ ಅನುಭವಗಳನ್ನು ಕಲೆಯಾಗಿ ಮಾರ್ಪಡಿಸುವ ಜವಾಬ್ದಾರಿ ಇವೆಲ್ಲ ಮೆಚ್ಚತಕ್ಕ ಸಂಗತಿ.

ಇದೊಂದು ಸ್ತ್ರೀ ಪ್ರಧಾನ ಕಾದಂಬರಿ. ಹೆಣ್ಣು, ಅವಳ ರೂಪ, ಸ್ವರೂಪ ಮತ್ತು ಅವಳ ವಿವಾಹ ಸಂಬಂಧಗಳ ಕುರಿತು ಕನ್ನಡ ಕಾದಂಬರಿಗಳಲ್ಲಿ

*PAGE DONATED BY :* ***SMT. KALA BHAGWAT,*** **KHARGAR** ***IN MEMORY OF MOTHER LATE SMT. GOURI BHAT***

# Common Herbs for Home Remedies

✍ Dr. Narayan G. Hegde



### Ginger : *Zingiber officinale*



**Habitat :** Ginger is a perennial herb with underground rhizomes having leafy shoots of 0.5 to 0.8 m height. It grows well in warm and humid climate. The propagation is through small pieces of rhizomes having buds and the crop will be ready after 9-10 months of planting.

**Uses :** Fresh or dried ginger rhizomes are used in cooking. Ginger is rich in antioxidants and helpful to treat arthritis, inflammation and various types of infections and diseases. It has the potential to reduce the risk of diabetes, cancer, and other health problems.

- It is used for treating rheumatoid arthritis, chronic anterior uveitis, conjunctivitis, skin cancer, small pox, chicken pox, wound healing, urinary tract infections and liver ailments.
- Ginger has anti-inflammatory, antibacterial, antiviral, and other healthful properties.
- Ginger is helpful to treat cardiovascular disease.
- It contains enzymes like trypsin and pancreatic lipase, helpful for digestion and to break up and expel the gas and prevent constipation.
- It helps in reducing morning sickness and relieving nausea following cancer treatment.
- Ginger is good for treating cough, cold and flu.

ಸಾಕಷ್ಟು ಚರ್ಚೆ ನಡೆದಿದೆ. ತ್ರಿವೇಣಿ ಅವರ 'ಮುಕ್ತಿ' ಕಾದಂಬರಿಯಲ್ಲಿ ಬರುವ ಅಮೃತಾಳದು ಇದೇ ಬಗೆಯ ಪಾತ್ರ. ದೂರದ ಮುಂಬೈಯಲ್ಲಿ ತನ್ನ ಭವಿಷ್ಯವನ್ನು ಕಂಡುಕೊಳ್ಳುವ ಅಮೃತಾ ಕೊನೆಗೆ ವಿಧುರನೊಬ್ಬನನ್ನು ವಿವಾಹವಾಗುತ್ತಾಳೆ. ಆದರೆ ತ್ರಿವೇಣಿ ಅವರಿಗೆ ನಾಯಕಿಯನ್ನು ಒಳಗಿನಿಂದ ನೋಡಲು ಸಾಧ್ಯವಾಗಿಲ್ಲ. ಅಮಿತಾ ಅವರು ಆ ಕೆಲಸವನ್ನು ಈ ಕೃತಿಯಲ್ಲಿ ಅತ್ಯಂತ ಯಶಸ್ವಿಯಾಗಿ ಮಾಡಿದ್ದಾರೆ. ಚಿತ್ತಾಲರ 'ಮೂರು ದಾರಿಗಳು' ಕಾದಂಬರಿಯ ನಾಯಕಿ ನಿರ್ಮಲೆ ಸಹ ಕಾರವಾರದಲ್ಲಿ ವಿದ್ಯಾಭ್ಯಾಸ ಮಾಡುವಾಗ ಏನೆಲ್ಲ ಪುಕಾರುಗಳೆದ್ದು ಹಿಂಸೆಯನ್ನು ಅನುಭವಿಸುತ್ತಾಳೋ ಸರಯೂ ಅದೆಲ್ಲವನ್ನು ಮೆಟ್ಟಿನಿಂತು ಯಶಸ್ವಿ ಮಹಿಳೆಯಾಗಿ ಕಂಗೊಳಿಸುತ್ತಾಳೆ.

ಸ್ವಾಭಿಮಾನ, ಧೈರ್ಯ, ಮಹತ್ವಾಕಾಂಕ್ಷೆಗಳಿದ್ದರೆ ವ್ಯಕ್ತಿತ್ವ ವಿಕಾಸ ಹಾಗೂ ಸಮಾಜವನ್ನು ತನ್ನ ಆದರ್ಶಗಳಿಗೆ ಅನುಗುಣವಾಗಿ ಪರಿವರ್ತಿಸಲು ಸಾಧ್ಯ ಎಂಬ ಧ್ವನಿಶಕ್ತಿ ಇಲ್ಲಿ ಪ್ರಕಟವಾಗಿದೆ. ಸಮಾಜದಲ್ಲಿ ಮಹಿಳೆ ಎದುರಿಸಬೇಕಾದ ಆಯ್ಕೆಯ ಪ್ರಶ್ನೆ ಇಲ್ಲಿ ಮುನ್ನಲೆಗೆ ಬಂದು ಕಾದಂಬರಿಯ ಹಿರಿಮೆಯನ್ನು ಹೆಚ್ಚಿಸಿದೆ. ಸರಯೂಳ ಅದಮ್ಯ ಜೀವನೋತ್ಸಾಹದ ಪ್ರತೀಕವಾಗಿ ಇಲ್ಲಿ ಮತ್ತೆ ಮತ್ತೆ ಕಡಲಿನ ವರ್ಣನೆ ಬಂದಿದೆ. ಹೀಗಿದ್ದೂ ಲೇಖಕರು ವರ್ಣನೆ ವ್ಯಾಖ್ಯಾನಗಳನ್ನು ಅವಲಂಬಿಸದೆ ಕಥನವನ್ನು ಸಮರ್ಥವಾಗಿ ಮುನ್ನಡೆಸುತ್ತಾರೆ. ಈ ಪುನರಪಿ ಬಣ್ಣನೆ ಕಾದಂಬರಿಯ ಏಕಾಗ್ರತೆಗೆ ಭಂಗ ತಂದಿಲ್ಲ ಎಂಬುದು ಹೇಳಲೇಬೇಕಾದ ಸಂಗತಿ. "ಈ ಕಾದಂಬರಿಯಲ್ಲಿ ಬಿಡಿ ಮತ್ತು ಇಡಿಗಳ ನಡುವೆ ಲೇಖಕಿ ಸಾಧಿಸಿರುವ ಹದ ಅಪರೂಪದ್ದಾಗಿದೆ" ಎಂದು ಜಯಂತ ಕಾಯ್ಕಿಣಿಯವರು ಬೆನ್ನುಡಿಯಲ್ಲಿ ಹೇಳಿದ ಮಾತಿನಲ್ಲಿ ಉತ್ಪ್ರೇಕ್ಷೆಯಿಲ್ಲ. ಈ ಕೃತಿಗಾಗಿ ಅಮಿತಾ ಭಾಗವತ್ ಅವರಿಗೆ ಹಾರ್ದಿಕ ಅಭಿನಂದನೆಗಳು. ❍

## ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ
## ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ದತ್ತಿನಿಧಿ
## ಪ್ರಕಟಣೆ

ಕನ್ನಡ ಸಾರಸ್ವತ ಲೋಕದಲ್ಲಿ ಪ್ರಥಮಗಳ ಹರಿಕಾರರೆಂದೇ ಪ್ರಾತಃಸ್ಮರಣೀಯರಾದ ಶ್ರೀ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಇವರ ಸ್ಮರಣಾರ್ಥ ಮುಂಬಯಿ ಹವ್ಯಕ ವೆಲ್ಫೇರ್ ಟ್ರಸ್ಟ್ ವತಿಯಿಂದ 2005 ರಲ್ಲಿ 'ದತ್ತಿನಿಧಿ'ಯನ್ನು ಸ್ಥಾಪಿಸಿ, ಶ್ರೀ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರ ನೆಚ್ಚಿನ ಕಾರ್ಯಕ್ಷೇತ್ರಗಳಾದ ಸಾಹಿತ್ಯ, ಪತ್ರಿಕೋದ್ಯಮ ಮತ್ತು ಸಮಾಜ ಸೇವೆಗಳಲ್ಲಿ ಗಣನೀಯ ಸಾಧನೆಗೈದ ಕನ್ನಡಿಗರಲ್ಲಿ ಒಬ್ಬರನ್ನು ಗುರುತಿಸಿ ಕಳೆದ ಅನೇಕ ವರ್ಷಗಳಿಂದ **'ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ' ಪ್ರಶಸ್ತಿ**ಯನ್ನು ನೀಡಿ ಗೌರವಿಸಲಾಗುತ್ತಿದೆ. ಅದೇ ರೀತಿ 2023-24ನೇ ಸಾಲಿನ ಪ್ರಶಸ್ತಿಯನ್ನು **ಸಾಹಿತ್ಯ**ದಲ್ಲಿ ತಮ್ಮನ್ನು ಗುರುತಿಸಿಕೊಂಡಂತಹ ವ್ಯಕ್ತಿಗೆ ನೀಡುವ ಸರದಿಯಾಗಿದೆ. ಅಂತಹ ವ್ಯಕ್ತಿಗಳ ಹೆಸರನ್ನು ಸೂಚಿಸಿ ಅವರ ವಿವರಗಳನ್ನು ನಮ್ಮ ಸಂಸ್ಥೆಯ ವಿಳಾಸಕ್ಕೆ, ಇಮೇಲ್ ಅಥವಾ ವೆಬ್‌ಸೈಟ್ ಮೂಲಕವೂ ಕಳುಹಿಸಬಹುದಾಗಿದೆ. ಈ ವಿವರಗಳು 30th November, 2023 ರ ಒಳಗಾಗಿ ನಮ್ಮ ಕೈಸೇರುವಂತೆ ಈ ಪ್ರಕಟಣೆಯ ಮೂಲಕ ವಿನಂತಿಸಿಕೊಳ್ಳುತ್ತಿದ್ದೇವೆ. ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮ ನಿರ್ಧಾರವಾಗಿರುತ್ತದೆ.

*PAGE DONATED BY : **SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT***

# ಮಾಸ ಭವಿಷ್ಯ

✍ ಶ್ರೀಪತಿ ಭಟ್



**ಮೇಷ :** ಆಯ್ಕೆ ಸರಿಯಾಗಿದ್ದು ಕೆಲಸಗಳನ್ನು ನಿರ್ಭಯವಾಗಿ ಮಾಡಿ ಮುಗಿಸುವಲ್ಲಿ ಯಶಸ್ವಿಯಾಗುವಿರಿ. ಲೇವಾದೇವಿ ವ್ಯವಹಾರದಲ್ಲಿ ವಿಚಾರಿಸಿ. ತೀರ್ಮಾನ ಕೈಗೊಳ್ಳುವುದು ಉತ್ತಮ. ತಂದೆ ಮಾತನ್ನು ತಿರಸ್ಕರಿಸಬೇಡಿ (ಶುಭ ಸಂಖ್ಯೆ : 6) ಗಣಪತಿಗೆ ಗರಿಕೆ ಹಾರ ನೀಡಿ.

**ವೃಷಭ :** ಸಗಮ ಧಾನ್ಯ ವರ್ತಕರಿಗೆ ಜೋರಾದ ವಹಿವಾಟು ನಡೆದು ಲಾಭ ಬರುವುದು. ನಿಂತು ಹೋದ ಕೆಲಸಗಳನ್ನು ಪುನಃ ಆರಂಭ ಮಾಡುವ ಬಗ್ಗೆ ಗಮನ ಹರಿಸಿ. ವಿಮಾ ಸಲಹೆಗಾರರು ಬಲವಂತ ಪಡಿಸಬೇಡಿ. (ಶುಭ ಸಂಖ್ಯೆ : 3) ಶಿವ ಅಷ್ಟೋತ್ತರ ಪಠಿಸಿ.

**ಮಿಥುನ :** ಸರ್ಕಾರಿ ಇಲಾಖೆಯಲ್ಲಿ ಜೀವನ ನಡೆಸುತ್ತಿರುವವರಿಗೆ ಹಣದ ಆಸೆ ತೋರಿಸಿ ತಪ್ಪು ಕೆಲಸವನ್ನು ಮಾಡುವಂತೆ ಪ್ರಚೋದಿಸುವವರು ಎದುರಾಗಲಿದ್ದಾರೆ. ಜನರ ಸಂಪರ್ಕ ಬೆಳೆಸಿಕೊಳ್ಳುವುದನ್ನು ಅಭ್ಯಾಸ ಮಾಡಿ. (ಶುಭ ಸಂಖ್ಯೆ 8) ಕೃಷ್ಣನಿಗೆ ತೊಟ್ಟಿಲು ಸೇವೆ ಮಾಡಿಸಿ.

**ಕರ್ಕಾಟಕ :** ಜೀವನದಲ್ಲಿ ಅನಿರೀಕ್ಷಿತ ಬದಲಾವಣೆಗಳನ್ನು ಕಂಡುಕೊಳ್ಳುವ ಸ್ಥಿತಿ ಬರಲಿದೆ. ಹೊಸ ಮನೆಯನ್ನು ಭೋಗ್ಯಕ್ಕೆ ಕೊಡಲು ಮಾತುಕತೆ ನಡೆಯುವುದು. ವಿನೋದ ಸ್ವಭಾವ ಇತರರನ್ನು ಆಕರ್ಷಿಸುವುದು. (ಶುಭ ಸಂಖ್ಯೆ : 7) ಸುಬ್ರಹ್ಮಣ್ಯ ಸ್ವಾಮಿಗೆ ಎಳನೀರು ಅರ್ಪಿಸಿ.

**ಸಿಂಹ :** ವಿವಾಹದ ವಿಚಾರದಲ್ಲಿ ಅಂತಿಮವಾಗಿ ತೀರ್ಮಾನಕ್ಕೆ ಬರುವುದು ಉತ್ತಮವೆಂದು ಕಾಣುತ್ತದೆ. ವಿದ್ಯುತ್ ಉಪಕರಣಗಳ ಬಳಕೆಯಲ್ಲಿ ಜಾಗ್ರತೆ ವಹಿಸುವುದು ಉತ್ತಮ. ವಸ್ತುಗಳು ಪತ್ತೆಯಾಗಿ ಕೈ ಸೇರುವುದು. (ಶುಭ ಸಂಖ್ಯೆ : 9) ರಾಯರಿಗೆ ಕಡಲೆಕಾಳು ನೀಡಿ.

**ಕನ್ಯಾ :** ಹೆಂಡತಿಗೋಸ್ಕರ ಅಥವಾ ಹೆಂಡತಿಯ ತವರು ಮನೆಗೋಸ್ಕರವಾಗಿ ಖರ್ಚು ಮಾಡಬೇಕಾದ ಪರಿಸ್ಥಿತಿ ಬರಬಹುದು. ಷೇರು ವ್ಯವಹಾರಗಳಿಂದ ನಿರೀಕ್ಷಿಸಿದ ಲಾಭ ಬರುವುದು. ಮಕ್ಕಳಿಗೆ ಜೀವನದ ಪಾಠ ಹೇಳುವಿರಿ. (ಶುಭ ಸಂಖ್ಯೆ : 2) ಗಣಪತಿಗೆ ಕಡಲೆಕಾಳು ಹಾರ ಕೊಡಿ.

**ತುಲಾ :** ಬಂಧುಗಳ ಮಾತು ಮನಸ್ಸನ್ನು ಗಾಯ ಮಾಡಲಿದೆ. ಅದರಿಂದಾಗಿ ಮನಸ್ಸು ನಿರಾಸಕ್ತಿಯ ಭಾವನೆಯಿಂದ ಕೂಡಿರುವಂತಾಗಲಿದೆ. ಕೆಲಸದ ಬಗ್ಗೆ ವಿಮರ್ಶಿಸಿ ನಂತರದಲ್ಲಿ ಕಾರ್ಯರೂಪಕ್ಕೆ ತನ್ನಿರಿ. (ಶುಭ ಸಂಖ್ಯೆ : 4) ಸಾಯಿಬಾಬರಿಗೆ ಸಜ್ಜಿಗೆ ಪ್ರಸಾದ ನೀಡಿ.

**ವೃಶ್ಚಿಕ :** ಇಂಟೀರಿಯರ್ ಡೆಕೊರೇಟರ್ ಕೋರ್ಸ್ ಕಲಿಯುವಂತಹ ಆಸೆ ಹೊಂದಿದವರಿಗೆ ಶುಭ ಕಾಲ. ಸಂಬಂಧಗಳಿಗೆ ಅತಿಯಾಗಿ ಬೆಲೆ ಕೊಡುವ ನೀವು ಸಂಬಂಧಿಕರ ಮೋಸಕ್ಕೆ ಕಣ್ಣೀರಿಗೆ ಮರುಳಾಗದಿರಿ. (ಶುಭ ಸಂಖ್ಯೆ : 1) ವೆಂಕಟೇಶ್ವರ ಸ್ವಾಮಿಗೆ ಅಭಿಷೇಕ ಮಾಡಿಸಿ.

**ಧನು :** ರಾಜಕೀಯ ವ್ಯಕ್ತಿಗಳಿಗೆ ಸ್ಥಾನ ಬಲಪಡಿಸುವ ಕಾರ್ಯದಲ್ಲಿ ಹಿರಿಯ ಅಧಿಕಾರಿಗಳಿಂದ ಉಪಯೋಗವಾಗಲಿದೆ. ಹೊಸ ಕೆಲಸ ಕಾರ್ಯಗಳ ಬಗ್ಗೆ ಮನೆಯವರೊಂದಿಗೆ ಸುದೀರ್ಘವಾದ ಮಾತುಕತೆ ನಡೆಸಿ. (ಶುಭ ಸಂಖ್ಯೆ : 5) ಲಕ್ಷ್ಮೀದೇವಿಗೆ ಮಡಲಕ್ಕಿ ಅರ್ಪಿಸಿ.

**ಮಕರ :** ಪುರುಷ ಪ್ರಯತ್ನದ ಜೊತೆಯಲ್ಲಿ ದೇವರ ಅನುಗ್ರಹ ಯೋಜನೆಗೆ ಪುಷ್ಟಿ ಕೊಡುವುದು ಸಂತಸದ ವಿಚಾರ. ಗಮನಕ್ಕೆ ಬರುವ ತಪ್ಪುಗಳನ್ನು ಪುನರಾವರ್ತನೆಯಾಗದಂತೆ ಗಮನಿಸಿ. ಸಾಲ ತೆಗೆದುಕೊಳ್ಳಬೇಡಿ. (ಶುಭ ಸಂಖ್ಯೆ : 7) ಶನಿ ದೇವರಿಗೆ ಎಳ್ಳು ಎಣ್ಣೆ ಅರ್ಪಿಸಿ.

**ಕುಂಭ :** ಸಹೋದರಿಯ ಮದುವೆಯಂಥ ಸಂದರ್ಭಕ್ಕೆ ಆಪ್ತರೊಬ್ಬರು ನೆರವಿಗೆ ನಿಲ್ಲಲಿದ್ದಾರೆ. ವಿಚಾರಗಳನ್ನು ವಿವಾದಕ್ಕೊಳಗಾಗದಂತೆ ಅರ್ಥಮಾಡಿಸುವಲ್ಲಿ ಯಶಸ್ವಿಯಾಗುವಿರಿ. ಯೋಗಾಭ್ಯಾಸ ಮನಸ್ಸಿಗೆ ಹಿತವೆನಿಸುವುದು. (ಶುಭ ಸಂಖ್ಯೆ : 4) ಹನುಮಾನ್ ಚಾಲೀಸಾ ಪಠಿಸಿ.

**ಮೀನ :** ಬಂಧುಗಳ ಮಾತು ಮನಸ್ಸನ್ನು ಗಾಯ ಮಾಡಲಿದೆ. ಅದರಿಂದಾಗಿ ಮನಸ್ಸು ನಿರಾಸಕ್ತಿಯ ಭಾವನೆಯಿಂದ ಕೂಡಿರುವಂತಾಗಲಿದೆ. ಕೆಲಸ ಬಗ್ಗೆ ವಿಮರ್ಶಿಸಿ ನಂತರದಲ್ಲಿ ಕಾರ್ಯರೂಪಕ್ಕೆ ತನ್ನಿರಿ. (ಶುಭ ಸಂಖ್ಯೆ : 6) ರಾಮ ಭಜನೆ ಮಾಡಿ.

(ಶ್ರೀ ಶ್ರೀಪತಿ ಭಟ್ ಆಚಾರ್ಯರು ಪೇಜಾವರ ಶ್ರೀಗಳ ಅಧೀನದಲ್ಲಿ ಅವರ ವಿದ್ಯಾಪೀಠ ಆಶ್ರಮದಲ್ಲಿ ಅಧ್ಯಯನ ಮುಗಿಸಿದ್ದಾರೆ. ಅವರಿಗೆ ಜ್ಯೋತಿಷ್ಯ ಶಾಸ್ತ್ರದಲ್ಲಿ 20 ವರ್ಷಗಳ ಅನುಭವವಿದೆ. ವೇದ, ಉಪನಿಷತ್, ಜ್ಯೋತಿಷ್ಯದ ಪ್ರಕಾರಗಳನ್ನು ಚೆನ್ನಾಗಿ ಅಧ್ಯಯನ ಮಾಡಿ 20 ವರ್ಷಗಳ ಅನುಭವದಲ್ಲಿ ಬಡಬಗ್ಗರಿಗೆ ಸಹಾಯ ಮಾಡುತ್ತಾ ಇದ್ದಾರೆ. ಹನುಮಂತ ನಗರದ ಮಾರುತಿ ಸರ್ಕಲ್‌ನಲ್ಲಿ ಇರುವ ಬಲಮುರಿ ಗಣಪತಿ ದೇವಸ್ಥಾನದ ಪ್ರಧಾನ ಅರ್ಚಕರಾಗಿಯೂ25 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಸಂಪರ್ಕ ಸಂಖ್ಯೆ : 99000 00198)

UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*

# HAVYAKA WELFARE TRUST

We are working on strengthening our community and the work we do, we request your co operation in updating our existing membership record.

Please Note: By entering these details you are agreeing to share the form data with the authorised members of Havyaka Welfare Trust Mumbai.

1. Name ______________________________
2. Contact Number ______________________________
3. Date of Birth ______________________________
4. Address ______________________________
______________________________
5. Pincode ______________________________
6. Email ID ______________________________
7. Profession ______________________________
8. Company you are working with ______________________________
9. Reason to join professional network
   - ☐ To Get access to the professional Work (Provide/to seek Job)
   - ☐ To mentor the Youth
   - ☐ To Grow my Business
   - ☐ To Contribute to the community
10. If you are a Job seeker, what kind of Job/Career you are looking for* ______________________________
11. If you have an established career and would like to help those seeking one, how you can help ?
______________________________
12. Areas of specialisation /Skills ______________________________
13. If you are in business, what support you are expecting to grow your business
______________________________
14. If you wish to contribute to the community, how can you help?
______________________________
15. Are you under the age of 35 or know someone who is ? Recommend for them to become a part of youth wing ! ( Write their name & Contact)
______________________________
16. Additional comments, if any ______________________________

Thank you for your time !

*PAGE DONATED BY :* ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

# ಸಂಕ್ಷಿಪ್ತ ಸುದ್ದಿಗಳು

## AGM REPORT

"We are only as strong as we are united, as weak as we are divided" expressed shri Shivkumar Bhagwat the President as he addressed the 59th Annual General Body meeting of Havyaka Welfare Trust." When we come together, share our knowledge we build oneness and are strengthened. We can also buildup good supporting system. The real strength comes when you feel you are not alone in this world. Your wellbeing is not the concern of your family alone. Yes, Havyaka Welfare Trust is our extended family. We are happy when we feel we are surrounded by those who care for us and happier when we realize that the number is more "said Shivkumar Bhagwat stressing the importance of being united. He thanked the secretary Narayan Akadas, and vice President Sanjay Bhat and other members of the Managing committee who played key role in the smooth functioning of the Trust. He also appreciated work done by Women Wing, KVSS Committee and Editorial team. He also said that the coming year is the 60th year and we should make this year a memorable one". The 59th AGM of the Havyaka Welfare Trust was held on 27th August, 2023 at Havyakara Sabhagraha Ghatkopar.

Vice President Sanjay Bhat presented the members with financial position of the Trust for the current year. With the consent of the members, 58th AGM minutes and Annual report were taken as read and confirmed. After the due deliberation, Income and Expenditure Account and Balance Sheet for the year ended on 31.03.2023 were approved and adopted.

Shri. K. N. Bhat proprietor of M/S N.K. Bhat & Company was reappointed as Statutory Auditor for the year 2023-2024. Shri Mahesh Hegde was reappointed as the Internal Auditor for the year 2023-2024.

Shri. Prakash Rao, Hon. Returning Officer was invited by Hon. Gen. Secretary to announce the names of seven new Managing Committee Members elected unanimously for the year 2023-2024 & 2024-2025. Shri. Prakash Rao declared Shri. Narayan Akadas, Smt. Shashikala Hegde, Shri. Prakash Bhat, Shri. Prakash Hegde, Shri. Ganapati Hegde, Shri. N. K. Hegde and Shri. Umesh Hedge as elected unopposed. Shri. Vasant Bhat explained the Vision, Mission and Value Statement of the Trust. President Shri. Shivkumar Bhagwat presented the report submitted by the sub-committee for better utilisation of the Havyakara Sabhagraha, Ghatkopar and Dhyana Mandir Dombivli. He further took the views of the members about the various options available for Dombivli Medical Centre. The Meeting concluded with a vote of thanks from Vice President Shri. Sanjay Bhat.

In the morning the entertainment programme enthralled the audience. The function started with the prayer by Smt. Seema Bhat. A skit was performed by Usha Kodlekere, Tanuja Bhat, Roopa Bhat, Shashikala Rao, Anjana Hegde and Sanjana Kodlekere and another one by Hema Hegde, Lalitha Markande, Gouri Bhat, Shobha Bhat, Asha Bhat. Master Abhay Hegde performed Harmonium solo accompanied with Tabla by Shri Sateesh Hegde. Smt. Medhini Hegde played bansuri. Kathak dance was performed by Smt. Ranjana Hegde. Smt Sunanda Bhat read self written poem. Marathi Abhang was performed by Shri. Rajat Hegde and Shri Tejas Hegde. Shri. N. K. Hegde and Shri. G. V. Hegde sang the bhajans. The Past President Shri. G. N. Hegde sang the film songs and danced with the audience. A delicious lunch and the high tea in the evening were served to all. The programme was anchored by Shri. Chandrashekhar Joshi.

The program ended with National Anthem.

## ವಾರ್ಷಿಕ ದುರ್ಗಾಪೂಜೆ



**ದಿನಾಂಕ : 15 ಅಕ್ಟೋಬರ್, 2023 ರವಿವಾರ**

**ಸ್ಥಳ : ಹವ್ಯಕರ ಸಭಾಗೃಹ,** ದೀಪ್ತಿ ಸೊಲಿಟೇರ್, ಎಮ್. ಜಿ. ರೋಡ್ ಮತ್ತು ಎಲ್. ಬಿ. ಎಸ್. ಮಾರ್ಗ ಜಂಕ್ಷನ್, ಘಾಟ್‌ಕೋಪರ್ (ಪ.)

**ವೇಳೆ : ಮಧ್ಯಾಹ್ನ 3.00 ರಿಂದ**

**ಕಾರ್ಯಕ್ರಮಗಳ ವಿವರ :–**

**ಲಲಿತಾ ಸಹಸ್ರನಾಮ, ಕುಂಕುಮಾರ್ಚನೆ, ಮಹಾಮಂಗಳಾರತಿ**

**ಹಿರಿಯರಿಗೆ ಸನ್ಮಾನ / Felicitation of the Elderly**

**ಪ್ರತಿಭಾ ಪುರಸ್ಕಾರ / Felicitation of the Meritorious Students**


**ಪ್ರಸಾದ ಭೋಜನ / Dinner**

**ಭಜನೆ – ಹವ್ಯಕ ಭಜನಾ ಮಂಡಳಿ, ಡೊಂಬಿವಿಲಿ**

***ಸದಸ್ಯರೆಲ್ಲರೂ ಸಕುಟುಂಬ, ಇಷ್ಟಮಿತ್ರರೊಂದಿಗೆ ಪೂಜೆಯಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿ.***

*PAGE DONATED BY : **SHRI A. K. BHAT, CHITRIGI & FAMILY***

## ನಿಧನ ವಾರ್ತೆ



**ಸುಬ್ರಾಯ ತಿಮ್ಮಣ್ಣ ಭಟ್ಟ (ಗಪ್ಪಿ ಮನೆ), ಚಿತ್ರಗಿ** ಇವರು ಮೂಲತಃ ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಚಿತ್ರಗಿಯವರು. ಇವರು ಇತ್ತೀಚೆಗೆ ಹೊಲನಗದ್ದೆಯ ತಮ್ಮ ಸ್ವಗೃಹದಲ್ಲಿ ತಮ್ಮ 90ನೇ ವಯಸ್ಸಿನಲ್ಲಿ ನಿಧನರಾದರು. ಸುಮಾರು 30 ವರ್ಷಗಳ ಕಾಲ ಮಹಾರಾಷ್ಟ್ರದ ಸರಕಾರದ ನೀರಾವರಿ ಇಲಾಖೆಯಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ. ಕೊಯ್ನಾದಲ್ಲಿ ತಮ್ಮ ವೃತ್ತಿ ಜೀವನ ಆರಂಭಿಸಿ ಶಹಾಪುರದಲ್ಲಿ ಪ್ರಥಮ ದರ್ಜೆ ಕ್ಲರ್ಕ್ ಆಗಿ 1992ರಲ್ಲಿ ಸೇವಾ ನಿವೃತ್ತಿ ಹೊಂದಿದರು. ಶ್ರೀಯುತರು ತಮ್ಮ ಧರ್ಮಪತ್ನಿ ಶ್ರೀಮತಿ ಜಾಹ್ನವಿ ಭಟ್ಟ ಹಾಗೂ ಇಬ್ಬರು ಮಕ್ಕಳಾದ ಗಣೇಶ ಮತ್ತು ನಾರಾಯಣ, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ.

✶✶✶



**ಗಣಪಯ್ಯ ನಾಗಪ್ಪ ಹೆಗಡೆ**ಯವರು ಮೂಲತಃ ಅಂಕೋಲಾ ತಾಲೂಕಿನ ಅಚವೆ ಗ್ರಾಮದವರು. ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಇವರು ಮುಂಬಯಿಯಲ್ಲಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿ, Bombay Stock Exchange ನಲ್ಲಿ ಸದಸ್ಯತ್ವ ಪಡೆದು Reserve Bank's Approved Broker for Govt. Securities ಎಂದು ತಮ್ಮನ್ನು ತಾವು ಗುರುತಿಸಿಕೊಂಡ ಪ್ರಥಮ ಹವ್ಯಕರೆನಿಸಿದವರು. Bombay Stock Exchange ನಲ್ಲಿ ಸ್ವಂತ ಆಫೀಸನ್ನು ನಡೆಸಿದವರು. ಜಿ. ಎನ್. ಹೆಗಡೆಯವರು ಎಂದು ಮುಂಬಯಿ ಹವ್ಯಕರಿಗೆ ಪರಿಚಿತರಾದ ಇವರು ಹವ್ಯಕ ವೆಲ್ಫೇರ್ ಟ್ರಸ್ಟ್ ಮುಂಬಯಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಆಗಸ್ಟ್ 16, 2023 ರಂದು ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದ್ದಾರೆ. ಪತ್ನಿ ವೀಣಾ, ಮಕ್ಕಳು ದೀಪಕ್, ವರುಣ್, ಸೊಸೆ ಮಾನಸಿ ಹಾಗೂ ಅಪಾರ ಬಂಧು ಬಳಗವನ್ನು ಮೃತರು ಅಗಲಿದ್ದಾರೆ. ಇವರ ಆತ್ಮಕ್ಕೆ ಶಾಂತಿ ಹಾಗೂ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥನೆ.

✶✶✶



Yajur Upakarma at Dombivili Havyaka Medical Centre



Bhajan Performance at GSB Wadala Ganapati Mandala




GLLIMPSES OF A.G.M.

*RNI NO. MAHBIL / 2000 / 746,*
*Postal Registration No. MCN/161/2021-2023*
*WPP License No. MR / Tech / WPP-130 / North / 2021-2023*
*'Licence to post without prepayment'*

*Posted at Mumbai Patrika Channel Stg. Office Mumbai - 400 001*
Date of Publication : 1st of every month
REGISTERED NEWSPAPER
Date of Posting :
2nd, 3rd of every month

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098.
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

To,









**GLLIMPSES OF A.G.M.**